केवाड़, पु० दे० **किवाड़.**

केश, पु० ಕೂದಲು; ಜುಟ್ಟು.

केशरी, पु० ಸಿಂಹ.

केशी, पु० ಕುದುರೆ; ಸಿಂಹ; ದಟ್ಟವಾದ ಕೂದಲುಳ್ಳವನು.

केस, पु० ಕೂದಲು; ಕಣ್ಣಿನಲ್ಲಿ ದುರ್ಮಾಂಸ ಬೆಳೆಯುವ ರೋಗ.

केसर, पु० ಪುಷ್ಪಕೇಸರ; ಕುಂಕುಮ ಹೂವು; ಕುದುರೆ, ಸಿಂಹ ಮೊದಲಾದ ಮೃಗಗಳ ಕುತ್ತಿಗೆಯ ಮೇಲಿರುವ ಕೂದಲಿನ ಸಮೂಹ.

केसरिया, वि० ಕೇಸರ ಬಣ್ಣದ.

केसरी, पु० ಸಿಂಹ; ಕುದುರೆ; ಪುನ್ನಾಗ.

केसारी, स्त्री० ಬಟಾಣಿಯಂಥಾ ಒಂದು ಬಗೆಯ ಧಾನ್ಯ.

केहरी, पु० ಸಿಂಹ; ಕುದುರೆ.

केहा, पु० ನವಿಲು.

केहुनी, स्त्री० ಮೊಣಕೈ.

कैंचा, वि० ಜಗಳಗಂಟ; ಹರಟೆಗಾರ.

कैंची, स्त्री० ಕತ್ತರಿ.

कैंड़ा, पु० ನಕಾಸೆತಿದ್ದುವ ಯಂತ್ರ; ಅಳತೆಯ 'ಸ್ಕೇಲು'.

कै, **अव्य०** ಎಷ್ಟು.

क़ै, **स्त्री०** ವಾಂತಿ; ವಾಕರಿಕೆ; ಕಾರುವಿಕೆ.

कैतव, **पुं०** ಮೋಸ; ಕಪಟ; ಜೂಜಾಟ.

क़ैतून, **स्त्री०** ಒಂದುವಿಧವಾದ ಜರತಾರಿ.

कैथ / **कैथा** } **पुं०** ಬೇಲ; ಬೇಲದಹಣ್ಣು.

कैथिन, **स्त्री०** ಕಾಯಸ್ಥ ಹೆಂಗಸು.

क़ैथी, **स्त्री०** ಕರೀ ಬೇಲದಮರ; ಒಂದುಲಿಪಿ.

क़ैद, **स्त्री०** ಬಂಧನ; ತಡೆ; ಜೈಲು.

क़ैदख़ाना, **पुं०** ಸೆರೆಮನೆ; ಜೈಲು (**जेलख़ाना**).

क़ैद-तनहाई, **स्त्री०** ಅಪರಾಧಿಯನ್ನು ಕಿರುಮನೆಯೊಳಗೆ ಒಂಟಿಯಾಗಿರಿಸುವಿಕೆ.

क़ैद-महज़, **स्त्री०** ಸಾದಾಶಿಕ್ಷೆ.

कैद-सख़्त, **स्त्री०** ಕಠಿಣಶಿಕ್ಷೆ.

क़ैदी, **पुं०** ಬಂಧಿಸಲ್ಪಟ್ಟವನು; ಬಂದಿವಾನ; ಕೈದಿ.

कैफ़, **पुं०** ಅಮಲು; ಮದ.

कैफ़ियत, **स्त्री०** ಸಮಾಚಾರ; ಹೇಳಿಕೆ; ಪರಿಸ್ಥಿತಿ; ವರ್ಣನೆ;—**तलब करना** ನಿಯಮಾನುಸಾರವಾಗಿ ಕಾರಣಾದಿಗಳನ್ನು ಕೇಳುವುದು.

कैफ़ी, **वि०** ಮದಿಸಿದವನು; ಸೊಕ್ಕಿದವನು.

कैरव, **पुं०** ಕುಮುದ; ಶ್ವೇತಕಮಲ.

कैरा, **पुं०** ನರೆಬಣ್ಣ.

कैवल्य, **पुं०** ನಿರ್ಲಿಪ್ತತೆ; ಶುದ್ಧತೆ; ಸ್ವರ್ಗ.

कैसा, **वि०** ಯಾವರೀತಿಯ; ಯಾವ ಪ್ರಕಾರದ.

कैसे, **क्रि०** ಹೇಗೆ; ಯಾವರೀತಿಯಲ್ಲಿ; ಎಂತು.

कोंचना, **स०** ಚುಚ್ಚು; ಹಚ್ಚಿ ಚುಚ್ಚು.

कोंचा, **पुं०** ಕ್ರೌಂಚಪಕ್ಷಿ; ಕಾವಲಿಯ ಮೇಲಿನ ದೋಸೆ ಮೊದಲಾದುಗಳನ್ನು ತಿರುವಿಹಾಕುವ ಕಬ್ಬಿಣದ ಮಗಚು ಕೈ.

कोंछ, **पुं०** ಸೀರೆಯ ನೆರಿಗೆ.

कोंछियाना, **स०** ನೆರಿಗೆಹಾಕು.

कोंछी, **स्त्री०** ನೆರಿಗೆ.

कोंढ़ी, **स्त्री०** ಮೊಗ್ಗು; ಮುಗುಳು.

कोंपल, **स्त्री०** ಚಿಗುರು; ತಳಿರು.

कोंहड़ा, **पुं०** ದೇ० **कुम्हड़ा.**

कोआ, **पुं०** ಕಡೆಗಣ್ಣು; ರೇಶ್ಮೆ ಗೂಡು; ಹಲಸಿನ ತೊಳೆ.

कोइरी, **पुं०** ತರಕಾರಿ ಬೆಳೆಯುವವರ ಒಂದು ಜಾತಿ.

कोई, **क्रि०** ಒಬ್ಬಾನೊಬ್ಬ; ಒಂದಾನೊಂದು; ಒಬ್ಬಾನೊಬ್ಬಳು; ಯಾವನೋ; ಯಾವಳೋ; ಯಾವದೋ.

कोक, **पुं०** ಚಕ್ರವಾಕ; ತೋಳ; ಕಪ್ಪೆ; ಮಹಾವಿಷ್ಣು.

कोकशास्त्र, **पुं०** ಕಾಮಶಾಸ್ತ್ರ.

कोका, ಪುಂ ಸಾಕುತಾಯಿ ಮಕ್ಕಳು.

कोकिल } **कोकिला** } ಸ್ತ್ರೀಂ ಕೋಗಿಲೆ; ಪಿಕ; (कोयल).

कोख, ಸ್ತ್ರೀಂ ಹೊಟ್ಟೆ; ಜಠರ; ಕುಕ್ಷಿ; ಗರ್ಭಾಶಯ ;—**उजड़ना** ಗರ್ಭ ಸ್ರಾವವಾಗು ;—**खुलना** ಬಂಜೆತನವು ದೂರವಾಗು.

कोचना, ಸಂ ತಿವಿ ; ಇರಿ ; ತುರುಕು ; ಚುಚ್ಚು.

कोजागर, ಪುಂ ಶರತ್ಪೂರ್ಣಿಮೆ ; ಹುಣ್ಣಿಮೆ ಹಬ್ಬ.

कोट, ಪುಂ ದುರ್ಗ ; ಕೋಟೆ ; ಕಿಲ್ಲೆ ; ಸಮೂಹ ; ಕೋಟು.

कोटर, ಪುಂ ಪೊಟ್ಟರೆ.

कोटि, ಸ್ತ್ರೀಂ ಶ್ರೇಣಿ ; ಸಮೂಹ.

कोटिक, ವಿಂ ಕೋಟಿ ; ಅಸಂಖ್ಯ ; ಅಗಣಿತ.

कोटिशः, ಕ್ರಿಂ ಅನೇಕಾನೇಕ.

कोठड़ी } **कोठरी** } ಸ್ತ್ರೀಂ ಕೋಣೆ ; ಕೊಠಡಿ ; ಕಿರುಮನೆ.

कोठा, ಪುಂ ದೊಡ್ಡ ಕೊಠಡಿ ; ಭಂಡಾರ ; ಮಹಡಿ ; ಅಟ್ಟ ; ಗರ್ಭಾಶಯ ; ಹೊಟ್ಟೆ.

कोठार, ಪುಂ ಭಂಡಾರ ; ಕಾಳುಕಡ್ಡಿಯನ್ನು ಕೂಡುಹಾಕುವ ಸ್ಥಳ ; ಉಗ್ರಾಣ.

कोठारी, ಪುಂ ಭಂಡಾರಿ ; ಉಗ್ರಾಣಗಾರ.

कोठी, ಸ್ತ್ರೀಂ ಬಂಗಲೆ ; ಮಹಡಿ ; ದೊಡ್ಡ ಅಂಗಡಿ.

कोठीवाल, ಪುಂ ಸಾಹುಕಾರ ; ದೊಡ್ಡ ವ್ಯಾಪಾರಿ ; ಲೇವಾದೇವಿಗಾರ.

कोड़ना, ಸಂ ಹೊಲದಮಣ್ಣನ್ನು ಆಳವಾಗಿ ಅಗೆದು ಹೆಂಟೆಹೆಂಟೆಯಾಗಿ ತಿರುವಿಹಾಕು.

कोड़ा, ಪುಂ ಚಾಟಿ ; ಚಬುಕ ; ಮನನೋಯಿಸುವ ಮಾತು.

कोड़ी, ಸ್ತ್ರೀಂ ಇಪ್ಪತ್ತರ ಲೆಕ್ಕ.

कोढ़, ಪುಂ ಕುಷ್ಠವ್ಯಾಧಿ ;—**में खाज** ಆಪತ್ತಿನಮೇಲೆ ಆಪತ್ತು.

कोढ़ी, ಪುಂ ಕುಷ್ಠರೋಗಿ.

कोण, ಪುಂ ಕೋನ ; ಮೂಲೆ.

कोतल, ಪುಂ ಪಳಗಿಸಿರುವ ಆದರೆ ಸವಾರಿಗೆ ಬಾರದಕುದುರೆ ; ಮೆರವಣಿಗೆಯ ಕುದುರೆ ; ಕೇವಲ ರಾಜನ ಸವಾರಿಕುದುರೆ ; ಕೆಲಸವಿಲ್ಲದ.

कोतवाल, ಪುಂ ಪೋಲೀಸು ಅಧಿಕಾರಿ.

कोतवाली, ಸ್ತ್ರೀಂ ಪೋಲೀಸು ಅಧಿಕಾರಿಯ ಹುದ್ದೆ ಅಥವಾ ಠಾಣೆ.

कोतह, ವಿಂ ಚಿಕ್ಕ ; ಅಲ್ಪ.

कोता } **कोताह** } ವಿಂ ಚಿಕ್ಕ ; ಅಲ್ಪ.

कोताही, ಸ್ತ್ರೀಂ ಲೋಪ ; ದೋಷ.

कोथला, ಪುಂ ದೊಡ್ಡಚೀಲ ; ಹೊಟ್ಟೆ.

कोथली, ಸ್ತ್ರೀಂ ಸೊಂಟಕ್ಕೆ ಕಟ್ಟಿಕೊಳ್ಳುವ ಚೀಲ.

कोदों } **कोदो** } ಪುಂ ನವಣೆ ಅಕ್ಕಿ ;—**देकर पढ़ना** ಅರ್ಧಂಬರ್ಧ ಶಿಕ್ಷಣವನ್ನು ಸಂಪಾದಿಸು ; **छाती पर**

कोदो दलना ಉದ್ದೇಶ್ಯ ಪೂರ್ವಕವಾಗಿ ಪೀಡಿಸುವುದು.
कोना, ಪುಂ ಏಕಾಂತ; ತುದಿ.
कोनिया, ಸ್ತ್ರೀಂ ಮೂಲೆಯಲ್ಲಿ ಸಾಮಾನುಗಳನ್ನು ಇರಿಸಲು ಏರ್ಪಡಿಸಿದ ಹಲಗೆಯ ಅಂತಸ್ತುಗಳು.
कोपना, ಅಂ ಕೋಪಿಸು.
कोपल, ಪುಂ ತಳಿರು; ಅಂಕುರ.
कोपीन, ಪುಂ ಲಂಗೋಟಾ.
कोफ़्त, ಸ್ತ್ರೀಂ ದುಃಖ; ಖೇದ.
कोफ़्तगी, ಸ್ತ್ರೀಂ ಮರುಗು ಕೊಡುವಿಕೆ.
कोफ़्ता, ಪುಂ ಮಸಾಲೆಯಲ್ಲಿ ಹುರಿದ ಮಾಂಸ.
कोबी, ಪುಂ ಕೋಸು ಗಡ್ಡೆಹೂ.
कोयल, ಸ್ತ್ರೀಂ ಕೋಗಿಲೆ.
कोयला, ಪುಂ ಇದ್ದಲು; ಮಸಿಕೆಂಡ.
कोया, ಪುಂ ಕಣ್ಣು ಗುಡ್ಡಿ; ಕಡೆಗಣ್ಣು; ಹಲಸಿನ ಬೀಜ.
कोर, ಸ್ತ್ರೀಂ ಅಂಚು; ಕೊನೆ; ಮೂಲೆ; ವೈರ; ಆಯುಧದ ಧಾರೆ; ಪಂಕ್ತಿ; ಶ್ರೇಣಿ;—**दबाना** ವಶನಾಗುವುದು.
कोरकसर, ಸ್ತ್ರೀಂ ನ್ಯೂನತೆಗಳು.
कोरनिश, ಸ್ತ್ರೀಂ ಬಗ್ಗಿ ಸಲಾಮು ಮಾಡು.
क़ोरमा, ಪುಂ ಹೆಚ್ಚು ತುಪ್ಪದಲ್ಲಿಹುರಿದ ಮಾಂಸ.
कोरा, ವಿಂ ಹೊಸದು; ಖಾಲಿ; ರಿಕ್ತ; ಕೇವಲ; ಸ್ವಚ್ಛವಾದ;—**जवाब** ಸ್ಪಷ್ಟವಾಗಿ ಇಲ್ಲವೆನ್ನುವುದು;—**बचना** ಯಾವ ಕಷ್ಟಕ್ಕೂ ಸಿಗದಿರು;—**रह जाना** ಏನೂ ಸಿಗದೆ ಹೋಗು.
कोरान, ಪುಂ ದೇಂ **क़ुरान.**
कोरी, ಪುಂ ಹಿಂದೂ ನೆಯಿಗೆಯವ.
कोल, ಪುಂ ಹಂದಿ; ಮಡಿಲು; ಯುಳಚಿ ಹಣ್ಣು; ಮೆಣಸು.
कोलक, ಪುಂ ಅರ.
कोलिया, ಪುಂ ಇಕ್ಕಟ್ಟಾದದಾರಿ.
कोल्हू, ಪುಂ ಗಾಣ; ಎಣ್ಣೆಗಾಣ;—**का बैल** ಬಹಳ ಕಠಿಣವಾದ ಪರಿಶ್ರಮವನ್ನು ಮಾಡುವವನು.
कोविद, ವಿಂ ಪ್ರವೀಣ; ವಿದ್ವಾನ್.
कोश, ಪುಂ ಚೀಲ; ಮೊಟ್ಟೆ; ಆವರಣ; ಡಬ್ಬಿ; ಸಮೂಹ; ನಿಘಂಟು.
कोशकार, ಪುಂ ಕತ್ತಿಯ ಒರೆ ಅಥವಾ ನಿಘಂಟು ತಯಾರಿಸುವವ.
कोशागार, ಪುಂ ಭಂಡಾರ; ಖಜಾನೆ.
कोशिश, ಸ್ತ್ರೀಂ ಪ್ರಯತ್ನ.
कोष, ಪುಂ ದೇಂ **कोश.**
कोषाध्यक्ष, ಪುಂ ಕೋಶಾಧ್ಯಕ್ಷ; ಖಜಾಂಚಿ.
कोष्ठ, ಪುಂ ಹೊಟ್ಟೆಯ ಮಧ್ಯಭಾಗ.
कोष्ठक, ಪುಂ ಚಕ್ರಬಂಧ; ಆವರಣ ಚಿಹ್ನೆ; ಕಂಸ.
कोष्ठबद्ध, ಪುಂ ಮಲಬದ್ಧರೋಗ.
कोस, ಪುಂ ಎರಡು ಮೈಲಿಯದೂರ.
कोसना, ಸಂ ಬೈಯು. **पानी पी पी कर कोसना** ಬಹಳವಾಗಿ ಬೈಯ್ಯು.

कोसा, पु० ಮಧ್ಯ ಹಿಂದುಸ್ಥಾನದಲ್ಲಿ ದೊರಕುವ ಒಂದು ವಿಧವಾದ ರೇಶ್ಮೆ.

कोह, पु० ಪರ್ವತ; ಕ್ರೋಧ.

कोहकन, पु० ಬೆಟ್ಟ ತೋಡುವವ.

कोहकाफ़, पु० ಯೂರೋಪು ಮತ್ತು ಏಷ್ಯಾ ಖಂಡಗಳ ನಡುವಣ ಒಂದು ಪರ್ವತ.

कोहनी, स्त्री० ಮೊಣ ಕೈ.

कोहबार, पु० ವಿವಾಹಕಾಲದಲ್ಲಿ ಕುಲ ದೇವರನ್ನು ಪ್ರತಿಷ್ಠಾಪನ ಗೊಳಿಸುವ ಸ್ಥಾನ.

कोहरा, पु० ಮಂಜು; ಇಬ್ಬನಿ.

कोहान, पु० ಒಂಟೆಯ ಬೆನ್ನಿನ ಮೇಲಿರುವ ಡುಬ್ಬ.

कोहिस्तान, पु० ಮಲೆನಾಡು.

कोही, वि० ಕ್ರೋಧಿ; ಪರ್ವತ ಪ್ರದೇಶದ.

कौंध, स्त्री० ಮಿಂಚಿನ ಕಾಂತಿ.

कौंधना, अ० ಮಿಂಚು; ಹೊಳೆ.

कौंधनी, स्त्री० दे० **करधनी**.

कौंधा, पु० दे० **कौंध**.

कौआ, पु० दे० **कौवा**.

कौआना, अ० ಕನವರಿಸುವುದು.

कौटिल्य, पु० ವಕ್ರತನ; ಕಪಟ; ಚಾಣಕ್ಯ.

कौड़ा, पु० ದೊಡ್ಡ ಕವಡೆ.

कौड़िया, वि० ಕವಡೆಯ ಹಾಗಿನ.

कौड़ी, स्त्री० ಕವಡೆ; ಕವಡಿ.

कौतुकी, वि० ಹಾಸ್ಯಗಾರ.

कौतूहल, पु० ಕುತೂಹಲ.

कौन, स० ಯಾರು; ಯಾವುದು.

क़ौम, स्त्री० ಕೋಮು; ಜಾತಿ; ರಾಷ್ಟ್ರ.

क़ौमियत, स्त्री० ರಾಷ್ಟ್ರೀಯತೆ.

क़ौमी, वि० ರಾಷ್ಟ್ರೀಯ.

कौमुदी, स्त्री० ಬೆಳದಿಂಗಳು.

कौर, पु० ತುತ್ತು; ಕವಳ.

कौरी, स्त्री० ಮಡಿಲು; ತಬ್ಬುವುದು; ಒಂದುಸಲ ಎರಡು ಕೈಗಳಿಂದ ತಬ್ಬುವಷ್ಟು ಪದಾರ್ಥ.

कौल, वि० ಉತ್ತಮ ಕುಲದ; ಒಳ್ಳೇ ವಂಶದ; पु० ಕವಳ.

क़ौल, पु० ಮಾತು; ವಚನ; ಪ್ರತಿಜ್ಞೆ.

क़ौलक़रार, पु० ಪರಸ್ಪರ ದೃಢ ಪ್ರತಿಜ್ಞೆ; ಒಪ್ಪಂದ; ಕರಾರು.

कौवा, पु० ಕಾಗೆ.

क़ौवाल, पु० 'ಕೌವಾಲಿ' ಹಾಡುವವ.

क़ौवाली, स्त्री० ಒಂದು ಬಗೆಯ ದಾಸರ ಗೀತ.

कौशल, पु० ನಿಪುಣತೆ.

कौसर, पु० ದೊಡ್ಡದಾನಿ.

क्या, स० ಏನು. वि० ಎಂತಹ; ಎಂಥಾ. क्रि० ಯಾತಕ್ಕೆ.

क्यार, पु० ಮರದಕಟ್ಟೆ; ಕುದುರು.

क्यारी, स्त्री० दे० **कियारी**.

क्यों, क्रि० ಏಕೆ; ಏತಕ್ಕೆ.

क्रंदन, पु० ಅಳುವಿಕೆ; ಪ್ರಲಾಪ.

क्रमशः, क्रि० ಕ್ರಮವಾಗಿ; ಯಥಾವಿಧಿ.

क्रमागत, ಪ್ರು॰ ಕ್ರಮವಾಗಿ ನಡೆದು ಬಂದಿರುವ; ಪರಂಪರಾಗತವಾದ.

क्रयी, ಪ್ರು॰ ಕೊಂಡುಕೊಳ್ಳುವವನು.

क्रव्य, ಪ್ರು॰ ಮಾಂಸ.

क्रांत, ವಿ॰ ಆಕ್ರಮಿಸಲ್ಪಟ್ಟ.

क्रांति, ಸ್ತ್ರೀ॰ ಅದ್ಭುತವಾದ ಬದಲಾವಣೆ; ಗಮನ; ವಿಪ್ಲವ.

क्रिया, ಸ್ತ್ರೀ॰ ಕಾರ್ಯ; ಸ್ನಾನಸಂಧ್ಯಾದಿ ನಿತ್ಯಕರ್ಮ; ಶ್ರಾದ್ಧ.

क्रिस्तान, ಪ್ರು॰ ಕ್ರೈಸ್ತಮತದವ.

क्रीट, ಪ್ರು॰ ಕಿರೀಟ; ಮುಕುಟ.

क्रीडा, ಸ್ತ್ರೀ॰ ಆಟ.

क्रीत, ವಿ॰ ಬೆಲೆಗೆ ಕೊಂಡುಕೊಂಡ.

क्रुद्ध, ವಿ॰ ಕೋಪಗೊಂಡ.

क्रेता, ಪ್ರು॰ ಖರೀದಿ ಮಾಡುವವನು.

क्रोड़, ಸ್ತ್ರೀ॰ ವಕ್ಷಸ್ಥಳ; ಮಡಿಲು; ಹಂದಿ; ಶನಿಗ್ರಹ.

क्रोड़पत्र, ಪ್ರು॰ ಪುರವಣಿ; ಮೇಲ್ಸಂಚಿಕೆ.

क्रोश, ಪ್ರು॰ दे॰ कोस.

क्लांत, ವಿ॰ ಆಯಾಸಗೊಂಡಿರುವ.

क्लांति, ಸ್ತ್ರೀ॰ ಪರಿಶ್ರಮ; ಆಯಾಸ.

क्लिष्ट, ವಿ॰ ಕಠಿಣ; ದುಃಖದಾಯಕವಾದ; ಕಷ್ಟವಾದ.

क्लीब, ಪ್ರು॰ ನಪುಂಸಕ.

क्लेश, ಪ್ರು॰ ದುಃಖ; ವೇದನೆ.

क्लैब्य, ಪ್ರು॰ ಹೇಡಿತನ.

क्वचित्, ಕ್ರಿ॰ ಯಾವದೋ; ಬಹಳ ಕಡಿಮೆ.

क्वाथ, ಪ್ರು॰ ಕಷಾಯ.

क्वाँरा / **क्वारा** } ಪ್ರು॰ ಅವಿವಾಹಿತನು.

क्षंतव्य, ವಿ॰ ಕ್ಷಮೆಗೆ ಯೋಗ್ಯ; ಕ್ಷಮ್ಯ.

क्षणभंगुर, ವಿ॰ ಬಹುಬೇಗನೆ ನಾಶವಾಗತಕ್ಕ.

क्षत, ವಿ॰ ಒಡೆದುಹೋದ; ಪ್ರು॰ ಗಾಯ; ವ್ರಣ; ಕುರು.

क्षति, ಸ್ತ್ರೀ॰ ಕ್ಷಯ; ನಷ್ಟ; (हानि).

क्षत्र, ಪ್ರು॰ ಬಲ; ರಾಷ್ಟ್ರ; ಧನ; ಶರೀರ; ಜಲ; ಕ್ಷತ್ರಿಯ.

क्षम, ವಿ॰ ಯೋಗ್ಯ; ಸಮರ್ಥ.

क्षमता, ಸ್ತ್ರೀ॰ ಸಾಮರ್ಥ್ಯ; ಶಕ್ತಿ.

क्षमा, ಸ್ತ್ರೀ॰ ಸಹನಶೀಲತೆ; ಭೂಮಿ.

क्षम्य, ವಿ॰ ಕ್ಷಮಿಸಲು ಯೋಗ್ಯ.

क्षयी, ವಿ॰ ಕ್ಷಯ ಪೀಡಿತ; ಪ್ರು॰ ಚಂದ್ರ.

क्षर, ವಿ॰ ನಶ್ವರವಾದ; ನಾಶವಾನ್; ಪ್ರು॰ ಜಲ; ಮೇಘ.

क्षात्र, ವಿ॰ ಕ್ಷತ್ರಿಯರಿಗೆ ಸಂಬಂಧಪಟ್ಟ.

क्षार, ಪ್ರು॰ ವಿಸ್ಫೋಟಕ ಭಸ್ಮ; ಉಪ್ಪು; ಕಾರ.

क्षिति, ಪ್ರು॰ ಭೂಮಿ; ವಾಸಸ್ಥಾನ.

क्षितिज, ಪ್ರು॰ ಮಂಗಳ ಗ್ರಹ; ಎರೆಹುಳು; ಮರ; ದಿಗಂತ.

क्षिप्त, ವಿ॰ ಪತಿತ; ತ್ಯಜಿಸಿದ; ಹರಡಿದ.

क्षिप्र, ಕ್ರಿ॰ ಬೇಗನೆ; ತಕ್ಷಣ.

क्षीर, ಪ್ರು॰ ಹಾಲು.

क्षुद्र, ವಿ॰ ಕೃಪಣ; ಅಲ್ಪ; ತುಚ್ಛ.

क्षुधा, स्त्री० ಹಸಿವು.
क्षुधित, वि० ಹಸಿದ.
क्षुब्ध, वि० ವ್ಯಾಕುಲ; ಭಯಭೀತ.
क्षुभित, वि० ಕ್ಷುಬ್ಧ.
क्षेत्र, पु० ಸ್ಥಾನ; ಹೊಲ; ಯಾತ್ರಾಸ್ಥಳ; ಪತ್ನಿ; ಶರೀರ.
क्षेत्रपाल, पु० ದ್ವಾರಪಾಲಕ; ಹೊಲ ಕಾಯುವವ; ಹಾವು.
क्षेत्रफल, पु० ವಿಸ್ತೀರ್ಣ; रक़बा.
क्षेपक, वि० ಎಸೆಯುವವನು; ನಿಂದನೀಯ; ಮಿಶ್ರಿತವಾದ.
क्षोभ, पु० ವ್ಯಾಕುಲತೆ; ಗಾಬರಿ; ಶೋಕ.

ख

खंख, वि० ಶೂನ್ಯ; ಬರಿದು.
खंखड़, वि० ಬಿರುಸಾದ; ಗಟ್ಟಿಯಾದ.
खंखार, पु० दे० खखार.
खंग, पु० ಖಡ್ಗ; ಕತ್ತಿ.
खंगर, वि० ಒಣಗಿರುವ; ಶುಷ್ಕ.
खंगारना, खंगालना स० ಮೇಲೆಮೇಲೆ ಕೊಳೆಯುವುದು; ಗಲಬರಿಸುವುದು.
खंगी, स्त्री० ಕಡಿಮೆ; ಕೊರತೆ.
खंज, पु० ಹೆಳವ.
खंजड़ी, पु० दे० खंजरी.
खंजन, पु० ಗವುಜು ಹಕ್ಕಿ.
खंजर, पु० ಕಠಾರಿ.
खंजरी, स्त्री० ಕಂಜರಿಯೆಂಬ ಒಂದು ಬಗೆಯ ತಮಟೆ ವಾದ್ಯ.
खंड, पु० ತುಂಡು; ಕಲ್ಲು ಸಕ್ಕರೆ.
खंडकाव्य, पु० ಕಥಾತ್ಮಕ ಕಾವ್ಯ.
खंडन, पु० ಖಂಡನೆ.
खंडना, स० ಖಂಡಿಸು; ತುಂಡರಿಸು.
खंडर, खंडहर पु० ಭಗ್ನಾವಶೇಷ; ಹಾಳು ಬಿದ್ದಿಮನೆ.
खंडित, वि० ಅಪೂರ್ಣ; ತುಂಡಾದ.
खंता, पु० ಮಮ್ಮಟಿ; ಗಡ್ಡಪಾರೆ.
ख़ंदक़, स्त्री० ಕಂದಕ; ನಗರ ಅಥವಾ ಕೋಟೆಯ ಸುತ್ತಲೂ ಇರುವ ದೊಡ್ಡ ಹೊಂಡ.
खंभ, खंभा पु० ಸ್ತಂಭ; ಕಂಬ; ಆಧಾರ.
खखार, पु० ಕಫ; ಶ್ಲೇಷ್ಮ.
खखारना, अ० ಕ್ಯಾಕರಿಸು.
खग, पु० ಹಕ್ಕಿ; ಬಾಣ; ನಕ್ಷತ್ರ; ಮೇಘ; ದೇವತೆ; ಸೂರ್ಯ; ಚಂದ್ರ; ವಾಯು.
खगना, अ० ನಾಟಿಹೋಗು; ಚುಚ್ಚು; ಅನುರಕ್ತವಾಗು.
खगहा, पु० ಗೇಂಡಾಮೃಗ.
खगोल, पु० ಆಕಾಶಮಂಡಲ.
खचन, पु० ಕಟ್ಟುವ ಅಥವಾ ಕೆತ್ತುವ ಕೆಲಸ; ಅಂಕಿತವಾಗುವಿಕೆ.
खचना, अ० ಚಿತ್ರಿತವಾಗು; ಕೆತ್ತಲ್ಪಡು; ಅಂಜು.
खचरा, वि० ವರ್ಣಸಂಕರ; ದುಷ್ಟ.
खचाखच, क्रि० ಕಿಕ್ಕಿರಿ.
खचाना, स० ಅಂಕಿತಗೊಳಿಸು; ಗುರುತುಮಾಡು.

खचित, वि० ಚಿತ್ರಿತ ; ಜಟಿತ.

खच्चर, पु० ಹೇಸರಗತ್ತೆ.

ख़ज़ानची, पु० ಬೊಕ್ಕಸದ ಅಧಿಕಾರಿ.

ख़ज़ाना, पु० ಖಜಾನೆ; ಕೋಶ; ನಿಧಿ.

खजुलाना, अ० दे० **खुजलाना.**

खजली, स्त्री० दे० **खुजली.**

खजूर, पु० ಖರ್ಜೂರ. **(छुहारा)**

खट, पु० ಗಟ್ಟಿಯಾದ ಪದಾರ್ಥವು ಖಟ್ ಎಂದು ಮುರಿದು ಹೋಗುವಿಕೆ;—**से** ತಕ್ಷಣ.

खटकना, अ० ಕಟಕಟ ಎಂದು ಸದ್ದಾಗು ; ಕೆಟ್ಟದೆನಿಸು.

खटका, पु० ಕಟಕಟ ಶಬ್ದ; ಚಿಂತೆ.

खटकाना, स० ಹೆದರಿಕೆ ಹುಟ್ಟಿಸು.

खटखट, स्त्री० ಕಟಕಟ ಎಂಬ ಶಬ್ದ ; ಜಗಳ; ರಗಳೆ; ಜಂಜಾಟ.

खटखटाना, स० ಬಾಗಿಲುತಟ್ಟು; ಜ್ಞಾಪಕಪಡಿಸು.

खटना, स० ದ್ರವ್ಯಾರ್ಜನೆ. अ० ಕಷ್ಟವೆನ್ನದೆ ಕಾರ್ಯದಲ್ಲಿ ಮುನ್ನುಗ್ಗುವುದು.

खटगीर, पु० ತಿಗುಣೆ.

खट-छप्पर, पु० ಪೊಳ್ಳೇಪರದ.

खटपट, स्त्री० ಮನಸ್ತಾಪ; ಜಗಳ.

खटपटिया, वि० ಜಗಳಗಂಟಿ; ತಂಟಲುಮಾರಿ.

खटमल, पु० ತಗಣೆ.

खटमिट्ठा } वि० ಸ್ವಲ್ಪಹುಳಿ ಮತ್ತು
खटमीठा } ಸಿಹಿಯಾಗಿರುವ ರುಚಿ.

खटराग, पु० ಜಗಳ; ರಗಳೆ.

खटाई, स्त्री० ಹುಳಿ; ಆಮ್ಲಗುಣ; —**में डालना** ಕೆಲಸವನ್ನು ಮುಗಿಸದೆ ಮುಂದರಿಸುತ್ತಲೇ ಇರುವುದು;—**में पड़ना** ಗೊತ್ತುಗುರಿ ಇಲ್ಲದಂತಾಗುವುದು.

खटाखट, क्रि० ಕಟಕಟ ಎಂಬುದಾಗಿ; ತಕ್ಷಣ; ಕೂಡಲೆ.

खटाना, अ० ಹುಳಿಯಾಗು; ಹುಳಿತಿರಗು; ನಿರ್ವಾಹವಾಗು.

खटाव, पु० ನಿರ್ವಾಹ.

खटास, पु० ಕಾಡುಬೆಕ್ಕು. स्त्री० ಹುಳಿ.

खटिया, स्त्री० ಮಂಚ; ಪಲ್ಲಂಗ.

खटोलना } पु० ಚಿಕ್ಕಮಂಚ.
खटोला }

खट्टा, वि० ಹುಳಿಯಾದ;—**होना** ಅಪ್ರಸನ್ನವಾಗು.

खट्टू, पु० ಸಂಪಾದಿಸುವವ.

खड़ंजा, पु० ಇಟ್ಟಿಗೆಯನ್ನು ಉದ್ದುದ್ದವಾಗಿ ಜೋಡಿಸುವಿಕೆ.

खड़, पु० ಹುಲ್ಲು; ಕಟ್ಟಿಗೆ.

खड़क, स्त्री० ಭಯ; ಖಡ್ ಖಡ್ ಸದ್ದು.

खड़खड़ाना, स० ಕಡಕಡ ಎಂದು ಶಬ್ದಮಾಡು.

खड़खड़िया स्त्री० ಪಾಲಕಿ; ಪಲ್ಲಕಿ.

खड़बड़ाना, अ० ವಿಚಲಿತವಾಗು; ಕ್ರಮ ತಪ್ಪುವುದು.

खड़बड़ी, स्त्री० ವ್ಯತಿಕ್ರಮ.

खड़बड़ा, वि० ಏರಿಳಿತಗಳುಳ್ಳ.

खड़मंडल, पुं० ಗಡಬಡಿ.

खड़सान, पुं० ಸಾಣೆಕಲ್ಲು.

खड़ा, वि० ನಿಂತಿರುವ; ನೇರವಾಗಿರುವ; ಸನ್ನದ್ಧ;—**करना** ನೆಡು; ನೆಟ್ಟಗೆ ನಿಲ್ಲಿಸು;—**रहना** ನಿಂತಿರು, ಕಾಯು;—**होना** ನಿಲ್ಲು; **खड़े खड़े** ನಿಂತಿದ್ದ ಹಾಗೆಯೇ.

खड़ाऊँ, स्त्री० ಹಾವುಗೆ; ಪಾದುಕೆ.

खड़ाका, पुं० दे० **खटका.**

खड़िया, खड़ी स्त्री० ಸೀಮೆಸುಣ್ಣ; ಜೇಡಿ ಮಣ್ಣು.

खड़ीबोली, स्त्री० ಆಧುನಿಕ ಹಿಂದೀ ಭಾಷೆ.

खड़्ग, पुं० ಕತ್ತಿ; ಖಡ್ಗಮೃಗ.

खड्ड, खड्ढा पुं० ಹೊಂಡ; ಗುಂಡಿ.

खत, पुं० ಘಾಯ; ಕ್ಷತ.

ख़त, पुं० ಪತ್ರ; ಕಾಗದ; ಅಕ್ಷರ; ಗೆರೆ; ಗಡ್ಡದ ಕೂದಲು; ಕ್ಷೌರ.

ख़तकिताबत, पुं० ಪತ್ರವ್ಯವಹಾರ.

ख़तना, पुं० ಸುನ್ನತಿ.

ख़तम, वि० ಮುಗಿದ; ತೀರಿದ; ಪೂರ್ಣ.

ख़तर, ख़तरा, पुं० ಭಯ; ಅಪಾಯ.

ख़ता, स्त्री० ಅಪರಾಧ; ಮೋಸ.

ख़तावर, वि० ಅಪರಾಧಿ.

खतियाना, स० ಆಯಾ ದಿವಸದ ಆಯವ್ಯಯಗಳ ಮತ್ತು ಕ್ರಯ ವಿಕ್ರಯಗಳ ಲೆಕ್ಕಾಚಾರವನ್ನು ಖಾತೇವಾರು ಬರೆದಿಡುವುದು.

खतियौनी, स्त्री० ಖಾತೆಕಿರ್ದಿ; ಖತಾವಣಿ; ಲೆಕ್ಕದ ಪುಸ್ತಕ.

खता, पुं० ಧಾನ್ಯವಿಡುವ ಸ್ಥಳ; ಗುಂಡಿ; ವಾಡೆ.

ख़त्म, वि० दे० **ख़तम.**

खदखदाना, खदबदाना अ० ತಳಮಳನೆ ಕುದಿ.

खदरा, वि० ಕೆಲಸಕ್ಕೆ ಬಾರದ.

ख़दशा, पुं० ಭಯ.

ख़दान, स्त्री० ಗಣಿ.

खदिर, पुं० ಕಾಚು.

ख़दीव, पुं० ಯಜಮಾನ; ಚಕ್ರವರ್ತಿ.

ख़देरना, स० ದೂರೀಕರಿಸು; ಅಟ್ಟು; ಓಡಿಸು.

खद्दर, पुं० ಖಾದಿಬಟ್ಟೆ.

खद्योत, पुं० ಮಿಂಚುಹುಳು; ಸೂರ್ಯ (जुगनू).

खन, पुं० ಕ್ಷಣ; ಕೂಡಲೆ; ಅಂತಸ್ತು.

खनक, पुं० ಇಲಿ; ಕನ್ನಹೊಡಿಯುವ ಕಳ್ಳ; ಭೂಮಿಯನ್ನು ಅಗೆಯುವವನು; ಭೂಗರ್ಭಶಾಸ್ತ್ರಜ್ಞ.

खनकना, अ० ಖನಖನ ಎಂದು ಸದ್ದಾಗು.

खनकाना, स० ಖನಖನ ಶಬ್ದ ಮಾಡು.

खनखना, वि० ಖನಖನ ಶಬ್ದವನ್ನು ಮಾಡುವಂಥಾದ್ದು.

खनखनाना, अ० ಖನಖನ ಎಂದು ಸದ್ದಾಗು.

खनना, स० ಅಗೆ; ತೋಡು.

ख़न्नास, पु० ದುಷ್ಟ; ಭೂತ; ಪ್ರೇತ.

खपची, स्त्री० ತೆಳುವಾದ ಬಿದಿರು ದಬ್ಬೆ ಅಥವಾ ಕಡ್ಡಿ.

खपड़ा, पु० ಹೆಂಚು; ಬೋಕಿ; ಓಡು.

खपड़ी, स्त्री० ಹುರಿಗಾಳು, ಹುರಿಗಡಲೆ ತಯಾರಿಸುವ ಮಣ್ಣಿನ ಬಾನೆ.

खपड़ैल, स्त्री० दे० **खपरैल.**

खपत / **खपती,** स्त्री० ಖರ್ಚಾಗುವಿಕೆ; ಮಾರಾಟ.

खपना, अ० ಹೇಗಾದರೂ ಖರ್ಚಾಗು; ಮಾರಾಟವಾಗು.

खपरा, पु० ಹೆಂಚು; ಓಡು; ಬೋಕಿ.

खपरिया, स्त्री० ರೇಂಟೆಯ ಗುಳ; ನೇಗಿಲಿನಗುಳ.

खपरी, स्त्री० ಬೋಕಿ; ಹೆಂಚು.

खपरेल / **खप्रैल,** स्त्री० ಹೆಂಚು.

खपाना, स० ಹೇಗಾದರೂ ವ್ಯಯವಾಗುವಂತೆ ಮಾಡು; ಪೂರೈಸು.

खप्पर, पु० ಮಣ್ಣಿನ ಬಟ್ಟಲು; ಭಿಕ್ಷಾಪಾತ್ರೆ; ಕಪಾಲ;—**भरना** ಕಪಾಲದಲ್ಲಿ ಸೋಮರಸ ಮುಂತಾದ್ದನ್ನು ತುಂಬಿಸಿ ಮಹಾಕಾಳಿಗೆ ಸಮರ್ಪಿಸು.

ख़फ़गी, स्त्री० ಕೋಪ; ಸಿಟ್ಟು.

ख़फ़ा, वि० ಅಪ್ರಸನ್ನ; ಕುಪಿತ.

ख़फ़ीफ़, वि० ಕ್ಷುದ್ರ; ಅಲ್ಪ.

ख़फ़ीफ़ा, स्त्री० ಸಣ್ಣ ನ್ಯಾಯಾಲಯ.

ख़फ़ीफ़ा-अदालत, पु० ಸಣ್ಣ ಪುಟ್ಟ ಆಪಾದನೆಗಳ ವಿಚಾರಣೆ ನಡೆಸಲು ಏರ್ಪಟ್ಟಿರುವ ಕೋರ್ಟು.

ख़बर, स्त्री० ಸಮಾಚಾರ; ಸಂದೇಶ; ಪರಿಸ್ಥಿತಿ;—**उड़ाना** ಗಾಳಿಸುದ್ದಿ ಹರಡು;—**लेना** ವಿಚಾರಿಸಿಕೊಳ್ಳು; ತರಾಟೆಗೆ ತೆಗೆದುಕೊಳ್ಳುವುದು.

ख़बरदार, वि० ಸಾವಧಾನ; ಜೋಕೆ.

ख़बरदारी, स्त्री० ಸಾವಧಾನತೆ.

ख़बरगीरी, स्त्री० ರಕ್ಷಣೆ.

खबर-रसा, पु० ದೂತ; ಓಲೆಕಾರ.

ख़बसा, पु० ಕೆಸರು; ರೊಚ್ಚು; ಬದಿ.

ख़बीस, पु० ದುಷ್ಟ.

ख़ब्त, पु० ಹುಚ್ಚು; ಬೆಪ್ಪು.

ख़ब्ती, वि० ಹುಚ್ಚ; ಬೆಪ್ಪ.

खब्बा, वि० ಪುರಗೈಲೊಡ್ಡ.

खम, पु० ಕಂಭ;—**ठोंकना** ಕುಸ್ತಿ ಮಾಡಲು ತೊಡೆತಟ್ಟು;—**खाना** स० ತಿರುಗುವುದು; ಬಗ್ಗುವುದು; —**दार** वि० ಬಗ್ಗಿದ; ತಿರುಗಿದ.

ख़मदम, पु० ದೃಢತೆ; ಪುರುಷಾರ್ಥ; ಸಾಹಸ.

ख़मीदा, वि० ಬಗ್ಗಿದ.

ख़मीर, पु० ಕಲೆಸಿದಹುಳಿ ಹಿಟ್ಟು; ಹುಳಿಹಿಡಿಸಲೋಸುಗ ಸೇರಿಸುವ ಪದಾರ್ಥ.

ख़मीरा, पु० ಖಮೀರಾ ಹೊಗೆಸೊಪ್ಪು.

ख़यानत, **स्त्री॰** ಅಡವಿಟ್ಟವಸ್ತುವನ್ನು ಹಿಂದಕ್ಕೆ ಕೊಡದಿರುವುದು; ನಂಬಿಕೆ ದ್ರೋಹ.

ख़याल, **पु॰** **दे॰** **ख़्याल.**

ख़य्याम, **पु॰** ಡೇರೆಮಾಡುವವ.

खर, **पु॰** ಕತ್ತೆ **वि॰** ತೀಕ್ಷ್ಣ.

खरकना, **अ॰** ಖರಖರ ಎಂದು ಸದ್ದಾಗು; ಚುಚ್ಚಿದಂತೆನೋಯು.

खरका, **पु॰** ಹುಲ್ಲಿನಕಡ್ಡಿ.

खरख़शा, **पु॰** ಭಯ; ಜಗಳ.

खरग, **पु॰** ಖಡ್ಗ; ಕತ್ತಿ.

ख़रगोश, **पु॰** ಮೊಲ.

खरच, **पु॰** **दे॰** **खर्च.**

खरचना, **स॰** ಖರ್ಚುಮಾಡು; ಉಪಯೋಗಿಸು.

खरचा, **पु॰** **दे॰** **खर्चा.**

खरतल, **वि॰** ಸ್ಪಷ್ಟ; ನಿಸ್ಸಂಕೋಚ ಸ್ವಭಾವದ.

खरदनी, **स्त्री॰** ತೋಪಡೆ.

खरधार, **पु॰** ಹರಿತವಾದ ಶಸ್ತ್ರ.

खरब, **पु॰** ಖರ್ವ; ನೂರು ಅರ್ಬುದ.

खरबूजा, **पु॰** ಕರಬೂಜದ ಹಣ್ಣು.

खरभर, **पु॰** ಗುಲ್ಲು; ಗಡಿಬಿಡಿ.

खरभराना, **अ॰** ಗುಲ್ಲೆಬ್ಬಿಸು.

खरमस्ती, **स्त्री॰** ದುಷ್ಟತನ.

खरल, **पु॰** ಔಷಧಿಯನ್ನು ಕುಟ್ಟುವ ಕಲ್ಲಿನ ಒರಳು; ಕಲ್ವತ್ತು;—**करना** ಪುಡಿಮಾಡು.

खरसान, **स्त्री॰** ಆಯುಧಗಳನ್ನು ಸಾಣೆ ಹಿಡಿಯುವ ಕಲ್ಲು.

खरहरा, **पु॰** ಗಿಡದ ಬರಲಿನಿಂದ ಮಾಡಿದ ಪೊರಕೆ; ಬರಲು.

खरहा, **वि॰** ಮೊಲ.

खरा, **वि॰** ತೀಕ್ಷ್ಣ; ಚುರುಕು; ಒಳ್ಳೆಯ; ಶುದ್ಧ;—**खोटा** ಒಳ್ಳೆಯದು ಕೆಟ್ಟದು; **खरी खरी सुनाना** ಕಂಡಂತೆ ಹೇಳು.

खराई, **स्त्री॰** ಶುದ್ಧತೆ; ಪವಿತ್ರತೆ.

खराऊँ, **स्त्री॰** **दे॰** **खड़ाऊँ.**

ख़राद, **पु॰** ಕಡೆಚಲು; ಮರದ ಅಥವಾ ಲೋಹದ ಪದಾರ್ಥಗಳನ್ನು ಬಗೆಬಗೆಯಾಗಿ ರೂಪಗೊಳಿಸಲು ಉಪಯೋಗಿಸುವ ತಿರುಗುವ ಚಕ್ರದ ಯಂತ್ರ; —**पर चढ़ना** ಸಾಣೆಯಿಡು; ಪರೀಕ್ಷಿಸು.

खरादना, **स॰** ಕಡೆಚಲು ಹಿಡಿ; ರೂಪುಗೊಳಿಸು.

खरापन, **पु॰** ಸತ್ಯ; ಶುದ್ಧತೆ; ಹುಚ್ಚುತನ.

ख़राब, **वि॰** ಕೆಟ್ಟ; ಹಾಳಾದ.

ख़राबा, **पु॰** ವಿನಾಶ; ನಷ್ಟ; ಹಾಳು.

ख़राबी, **स्त्री॰** ಕೆಡಕು; ದೋಷ.

ख़राश, **स्त्री॰** ಕೆರೆಯುವಿಕೆ.

खरिया, **स्त्री॰** ಕಲ್ಲೀಚೀಲ.

खरी, **स्त्री॰** ಸೀಮೆಸುಣ್ಣ.

खरीता, **पु॰** ಚೀಲ; ಜೇಬು.

ख़रीद, **स्त्री॰** ಕ್ರಯ; ಖರೀದಿ; —**फ़रोख़्त** ಕ್ರಯ ವಿಕ್ರಯ.

ख़रीदना, **स॰** ಕೊಳ್ಳು.

ख़रीदार, ಪುಂ ಗಿರಾಕಿ; ಕೊಂಡು ಕೊಳ್ಳುವವನು; ಗ್ರಾಹಕ.

ख़रीदारी, ಸ್ತ್ರೀಂ ಕ್ರಯ; ಕೊಂಡು ಕೊಳ್ಳುವಿಕೆ.

ख़रीफ़, ಸ್ತ್ರೀಂ ಮುಂಗಾರು ಬೆಳೆ.

खरोंच, ಸ್ತ್ರೀಂ ಪರಚಿದ ಗಾಯ.

खरोंचना, ಸಂ ಕೆರೆ; ಪರಚು.

ख़र्च, ಪುಂ ವ್ಯಯ; ವೆಚ್ಚ; ಖರ್ಚು; —**उठाना** ವೆಚ್ಚದ ಭಾರವನ್ನು ವಹಿಸು;—**चलाना** ಆವಶ್ಯಕ ವ್ಯಯಕ್ಕಾಗಿ ಹಣ ಕೊಡುತ್ತಿರು.

ख़र्चना, ಸಂ ವೆಚ್ಚಮಾಡು.

ख़र्चा, ಪುಂ ವೆಚ್ಚ.

खर्ची, ಸ್ತ್ರೀಂ ದಿನವಹಿ ವೆಚ್ಚಕ್ಕೆ ಬೇಕಾಗುವ ಹಣ.

ख़र्चीला, ವಿಂ ದುಂದುಗಾರ.

खर्जूर, ಪುಂ ಖರ್ಜೂರ. (**छुहारा**)

खर्पर, ಸ್ತ್ರೀಂ ದೇಂ **ख़प्पर.**

खर्रा, ಪುಂ ಭಾರೀ ಲೆಕ್ಕಾಚಾರದ ಕಾಗದ ಅಥವಾ ಪತ್ರಗಳು.

खर्राटा, ಪುಂ ಗೊರಕೆ. ಪುಂ ಕಲ್ಪತ್ತು.

खर्व, ವಿಂ ನ್ಯೂನಾಂಗ; ಲಘು.

खल, ತ್ರಿಂ ಕ್ರೂರ; ನೀಚ. ಪುಂ ಕಲ್ಪತ್ತು.

खलक़, ಪುಂ ಜಗತ್ತು; ಲೋಕ.

ख़लक़त, ಸ್ತ್ರೀಂ ಲೋಕ; ಜನರ ಗುಂಪು.

खलड़ी, ಸ್ತ್ರೀಂ ಚರ್ಮ; ತೊಗಲು.

खलता, ಸ್ತ್ರೀಂ ನೀಚತನ. ಪುಂ ಸೈನಿಕರ ಚೀಲ.

खलना, ಅಂ ಕೆಟ್ಟದೆನಿಸು.

ख़लफ़, ಪುಂ ಮಗ; ವಾರಸುದಾರ.

खलबल, ಸ್ತ್ರೀಂ ಗಲಾಟೆ; ಗುಲ್ಲು.

खलबलाना, ಅಂ ಗಲಾಟೆಯಾಗು.

खलबली, ಸ್ತ್ರೀಂ ವ್ಯಾಕುಲತೆ.

खलल, ಪುಂ ಅಡ್ಡಿ; ಬಾಧೆ.

ख़लवत, ಸ್ತ್ರೀಂ ಏಕಾಂತ; ನಿರ್ಜನ ಸ್ಥಾನ.

ख़ला, ಪುಂ ಆಕಾಶ; ಪಾಯಖಾನೆ; ಹುಟ್ಟು.

खलाना, ಸಂ ಖಾಲಿಮಾಡುವುದು.

ख़लायक़, ಸ್ತ್ರೀಂ ಸೃಷ್ಟಿಯ ಸಮಸ್ತ ಪ್ರಾಣಿಗಳು.

ख़लास, ವಿಂ ಸಮಾಪ್ತ; ಕೊನೆ.

ख़लाल, ಪುಂ ಹಲ್ಲುಚುಚ್ಚುವ ಕಡ್ಡಿ; ಇಸ್ಪೀಟು ಆಟದಲ್ಲಿ ಪೂರ್ಣ ಪರಾಜಯ.

ख़लासी, ಸ್ತ್ರೀಂ ಬಿಡುಗಡೆ; ರಜಾ. ಪುಂ ಜಹಜಿನ ನೌಕರ; ನಾವಿಕ.

खलित, ವಿಂ ಪತಿತ; ಚಂಚಲ.

खलियान, ಪುಂ ಕಣ; ಮೆದೆಹಾಕುವ ಸ್ಥಳ; ರಾಶಿ.

खलियाना, ಸಂ ತೊಗಟೆ ತೆಗೆ; ಸಿಪ್ಪೆ ಸುಲಿ.

खलिश, ಸ್ತ್ರೀಂ ನೋವು; ವೇದನೆ.

खलिहान, ಪುಂ **खलियान.**

खली, ಸ್ತ್ರೀಂ ಹಿಂಡಿ; ಪಿಣ್ಯಾಕ.

ख़लीक़, ವಿಂ ಸಜ್ಜನ.

खलीज, ಪುಂ ಆಖಾತ; ಕೊಲ್ಲಿ.

खलीता, ಪುಂ ದೇಂ **खरीता.**

ख़लीफ़, **वि०** ನಮ್ರತೆಯುಳ್ಳ.

ख़लीफ़ा, **पु०** ಮುಸಲ್ಮಾನರಮಹಾ ಧರ್ಮಗುರು; ಅಧ್ಯಕ್ಷ; ವೃದ್ಧ; ಅನುಭವಿ; ವಾರಸುದಾರ. **वि०** ಬಹಳ ಚತುರ ಮತ್ತು ಧೂರ್ತ.

खलील, **वि०** ನಿಜವಾದಗೆಳೆಯ; ಸಹೃದಯ.

खलु, **अव्य०** ನಿಶ್ಚಯ; ಅವಶ್ಯ.

ख़लेरा, **वि०** ಚಿಕ್ಕಮ್ಮ ಅಥವಾ ದೊಡ್ಡಮ್ಮನಿಗೆ ಸಂಬಂಧಿಸಿದ.

खलेल, **पु०** ವಾಸನೆಎಣ್ಣೆ.

ख़ल्क़, **स्त्री०** ಮಾನವ ಜಾತಿ; ಸಮಸ್ತ ಮನುಷ್ಯರು; ಸೃಷ್ಟಿ.

खलड़, **पु०** ತೊಗಲಿನ ಚೀಲ.

खल्व, **पु०** ತಲೆಗೂದಲು ಉದರಿ ಹೋಗುವ ಒಂದುರೋಗ.

खल्वाट, **वि०** ತಲೆಗೂದಲುದುರಿದ.

खवा, **पु०** ಹೆಗಲು.

खवाई, **स्त्री०** ತಿನ್ನುವಿಕೆ; ಊಟ; ಊಟಮಾಡುವಿಕೆ.

ख़वास, **पु०** ರಾಜ ಮಹಾರಾಜರ ಸೇವಕ; ಆಪ್ತಸೇವಕ.

ख़वासी, **स्त्री०** ಸೇವೆ; ಚಾಕರಿ.

खवैया, **पु०** ತಿನ್ನುವವನು.

ख़सख़श, **पु०** **दे०** **ख़सख़स.**

ख़श्म, **पु०** ಸಿಟ್ಟು; ರೋಷ; ಕೋಪ.

ख़स, **स्त्री०** ಲಾವಂಚದ ಬೇರು; ಮುಡಿವಾಳ.

खसकंत, **स्त्री०** ಸರಿಯುವಿಕೆ; ಜಾರಿ ಕೊಳ್ಳುವುದು.

खसकना, **अ०** ಜಾರು; ಸರಿ.

खसकाना, **स०** ಸರಿಯಿಸು.

ख़सख़स, **स्त्री०** ಗಸಗಸೆ ಬೀಜ.

खसखसा, **वि०** ಅವುಕಿದರೆ ಮರಳಿ ನಂತೆ ಬೇರೆಯಾಗುವ.

खसना, **अ०** ಬೀಳು; ಸವೆದುಹೋಗು.

ख़सम, **पु०** ಗಂಡ; ಒಡೆಯ.

ख़सरा, **पु०** ಶಾನುಭಾಗನಲ್ಲಿರುವ ಖೇತವಾರುಪಟ್ಟಿ.

ख़सलत, **स्त्री०** ಸ್ವಭಾವ; ಪ್ರಕೃತಿ.

खसाना, **स०** ಕೆಡವು.

खसिया, **वि०** ಬೀಜ ತೆಗೆದ; ನಪುಂಸಕ.

खसियाना, **स०** ಅಂಡಕೋಶವನ್ನು ಮರ್ದಿಸು; ಬೀಜ ತೆಗೆಯು.

ख़सी, **स्त्री०** ಬೀಜ ತೆಗೆದಪ್ರಾಣಿ.

खसीस, **वि०** ಲೋಭಿ; ಜಿಪುಣ.

खसूसन, **वि०** ಮುಖ್ಯವಾಗಿ.

खसूसियत, **स्त्री०** ವಿಶೇಷತೆ.

खसोट, **स्त्री०** ಬಲವಂತವಾಗಿ ಕೀಳುವಿಕೆ; ಸುಲಿಗೆ.

खसोटना, **स०** ಹೆಬ್ಬು; ಕಿತ್ತು ಎಳೆ.

ख़स्तगी, **स्त्री०** ಪೆಟ್ಟು; ಹೊಡತ.

ख़स्ता, **वि०** ಮುಟ್ಟಿದಮಾತ್ರಕ್ಕೆ ಚೂರು ಚೂರಾಗುವಂಥಾ; ದುಃಖಿ.

ख़स्सी, **पु०** ಆಡು; ಹೋತ;—**चढ़ाना** ಆಡನ್ನು ಬಲಿಕೊಡು.

खाँ, **पु०** **दे०** **खान.**

खांखर, **वि०** ಅನೇಕ ತೂತುಗಳುಳ್ಳ; ಟೊಳ್ಳು.

खाँग, पु० ಕೋರೆಹಲ್ಲು ; ಮುಳ್ಳು.

खांचना, स० ಅಂಕಿತಗೊಳಿಸು ; ಗುರುತುಮಾಡು ; ಎಳೆ.

खांचा, पु० ಬುಟ್ಟಿ; ಗೂಡೆ.

खांड़, स्त्री० ನಾಟಿಸಕ್ಕರೆ.

खांडा, पु० ಕತ್ತಿ.

खांसना, अ० ಕೆಮ್ಮು.

खांसी, स्त्री० ಕೆಮ್ಮಲು ; ಕೆಮ್ಮು.

खाई, स्त्री० ಕಂದಕ.

खाऊ, पु० ಹೊಟ್ಟೆಬಾಕ ; ತಿಂಡಿ ಪೋತ.

खाक, स्त्री० ಧೂಳು; ಮಣ್ಣು ; ಬೂದಿ. वि० ತುಚ್ಛವಾದ ;—**उड़ना** ನಾಶ ವಾಗಿ ಹೋಗು;—**छानना** ಬಹಳ ಹುಡುಕು ; ಕಂಗೆಟ್ಟು ಅಲೆ ದಾಡು;—**डालना** ಬಚ್ಚಿಡು; ಅಡ ಗಿಸು ;—**बरसना** ನಷ್ಟಭ್ರಷ್ಟ ವಾಗು ;—**में मिलना** ಮಣ್ಣು ಪಾಲಾಗು.

ख़ाकसार, वि० ದೀನ ; ನಮ್ರ. पु० ಪಂಜಾಬಿನಲ್ಲೂ ಉತ್ತರ ಹಿಂದೂ ಸ್ಥಾನದ ಇತರ ಭಾಗಗಳಲ್ಲೂ ಸಂಗಠಿತವಾಗಿರುವ ಮುಸಲ್ಮಾ ನರ ಒಂದು ಸ್ವಯಂಸೇವಕ ದಳ.

ख़ाका, पु० ಚಿತ್ರದ ರೇಖಾಕೃತಿ ; ನಕಾಶೆ; ನಕ್ಷೆ ; ಕಚ್ಚಾಮಸೂದೆ; —**उड़ाना** ನಕಲು ತೆಗೆ ; ಪರಿ ಹಾಸಮಾಡು.

ख़ाकी, वि० ಮಣ್ಣಿನಬಣ್ಣದ; ಖಾಕಿ.

खागना, अ० ನಾಟು ; ಚುಚ್ಚು.

खाज, स्त्री० ಕಜ್ಜಿ ; ತುರಿ. **कोढ़ में खाज** ದುಃಖದಮೇಲೆ ದುಃಖ.

खाजा, पु० ಕಜ್ಜಾಯ ; ಒಂದು ಬಗೆಯ ಮಿಠಾಯಿ.

खाट, स्त्री० ಮಂಚ ;—**खटोला** ಬಟ್ಟೆ ಬರೆ ;—**पर पड़ना** ಕಾಯಿಲೆ ಬೀಳು ;—**से लगना** ಬಹಳ ಕಾಯಿಲೆ ಬೀಳು.

खाड़ी, स्त्री० ಆಖಾತ ; ಕೊಲ್ಲಿ.

खात, पु० ಕೊಳ ; ಬಾವಿ ; ಗುಂಡಿ.

ख़ातमा, पु० ಸಮಾಪ್ತಿ ; ಮರಣ.

खाता, पु० ಧಾನ್ಯಕೂಡಿಡುವಗುಂಡಿ; ಖಾತೆಕಿರ್ದಿ; ವಿಭಾಗ;—**खोलना** ಹೊಸ ಸಂಬಂಧವನ್ನು ಸ್ಥಾಪಿಸು; —**डालना** ಲೇವಾದೇವಿಯನ್ನು ಆರಂಭಿಸು.

ख़ातिर, स्त्री० ಸಮ್ಮಾನ ; ಗೌರವ. अव्य० ಓಸ್ಕರ ; ಸಲುವಾಗಿ ; —**तवाज़ा** ಮೇಜವಾನಿ ಮಾಡು ವುದು.

ख़ातिरख़ाह, क्रि० ಇಚ್ಛಾನುಸಾರ; ಯಥೇಚ್ಛವಾಗಿ.

ख़ातिरजमा, स्त्री० ಆನಂದ.

ख़ातिरदारी, स्त्री० ಆದರಸತ್ಕಾರ.

ख़ातिरी, स्त्री० ಸತ್ಕಾರ.

खाती, स्त्री० ಗುಳಿ. पु० ಬಡಗಿ.

ख़ातून, स्त्री० ಭದ್ರಮಹಿಳೆ.

खाद, स्त्री० ಗೊಬ್ಬರ.

खादर, पु० ಕೆರೆಬಳಿಯ ಪ್ರದೇಶ ; ಗೋಚರಾವಿನ ಭೂಮಿ.

ख़ादिम, **पु०** ಸೇವಕ.

खादी, **स्त्री०** ಕೈನೂಲಿನ ಬಟ್ಟೆ.

खाद्य, **वि०** ತಿನ್ನಲು ಯೋಗ್ಯವಾದ; ಭಕ್ಷ್ಯ.

खान, **पु०** ಭೋಜನ. **स्त्री०** ಗಣಿ; ಖನಿ; ಭಂಡಾರ.

ख़ान, **पु०** ಸರದಾರ; ಪಠಾನರ ಬಿರುದು.

ख़ानक़ाह, **पु०** ಮುಸಲ್ಮಾನರ ಮಠ.

ख़ानख़ाना, **पु०** ಸರದಾರರ ಸರದಾರ.

ख़ानख़ाह, **पु०** **दे०** **ख़ाहमख़ाह.**

खानगी, **वि०** ಸ್ವಂತದ; ಖಾಸಗಿ. **स्त्री०** ವೇಶ್ಯೆ; ಸೂಳೆ.

ख़ानज़ादा, **पु०** ಶ್ರೀಮಂತನ ಮಗ.

ख़ानदान, **पु०** ವಂಶ; ಕುಟುಂಬ; ಮನೆತನ.

ख़ानदानी, **स्त्री०** ವಂಶಪಾರಂಪರ್ಯವಾಗಿಬಂದ; ಪೈತೃಕ.

खानपान, **पु०** ಊಟ ಉಪಚಾರ; ಅನ್ನ ನೀರು.

ख़ानबहादुर, **पु०** ಮುಸಲ್ಮಾನರಿಗೆ ಬ್ರಿಟಿಶ್ ಸರಕಾರದಿಂದ ಸಿಕ್ಕುವ ಒಂದು ಬಿರುದು.

ख़ानम, **स्त्री०** **दे०** **खातून.**

ख़ानसामाँ, **पु०** ಉಗ್ರಾಣದಲ್ಲಿ ಕೆಲಸ ಮಾಡುವವ; ಅಡಿಗೆಯವ.

खाना, **स०** ಊಟಮಾಡು; **कच्चा खा जाना** ಜೀವತಿನ್ನು; **खाने दौड़ना** ಸಿಟ್ಟಿಗೇಳು.

ख़ाना, **पु०** ಮನೆ; ಮಂದಿರ; ಸ್ಥಾನ; ಅಂಕಣ; ಅರೆ.

ख़ाना-ख़राब, **वि०** ದಿಕ್ಕೆಟ್ಟವ.

ख़ाना-जंगी, **स्त्री०** ಗೃಹಕಲಹ.

ख़ाना-ज़ाद, **पु०** ಮನೆಯ ಆಳು.

ख़ाना-तलाशी, **स्त्री०** ಮನೆಯ ಝಡತಿ.

ख़ाना-पुरी, **स्त्री०** ಕೋಷ್ಟಕ.

ख़ाना-बदोश, **वि०** ಮನೆಮಾರಿಲ್ಲದೆ ತಿರುಗುವವ.

ख़ाना-शुमारी, **स्त्री०** ಗೃಹಗಣನೆ; ಜನಗಣತಿ.

ख़ानादारी, **स्त्री०** ಮನೆತನ; ಮನೆಯ ಸಮಾಚಾರ.

खाना-पीना, **पु०** **दे०** **खानपान.**

खानि, **स्त्री०** ಗಣಿ; ಉತ್ಪತ್ತಿಸ್ಥಾನ.

खानिक, **पु०** ಗಣಿ.

खाब, **पु०** ಕನಸು. (**ख़्वाब**)

खाबड़, **वि०** ಹಳ್ಳತಿಟ್ಟಾದ; ತರಕಲು.

खाम, **पु०** ಲಕೋಟೆ; ಚೀಲ; ಜೋಡಣೆ.

ख़ाम, **वि०** ಪಕ್ವವಾಗದಿರುವ; ಹಸಿ; ಕಚ್ಚಾ; ಅನುಭವಹೀನ; ಕೆಟ್ಟ.

ख़ामख़याली, **स्त्री०** ವ್ಯರ್ಥದಮಾತು.

ख़ामख़ाह / **ख़ामख़ाही** } **क्रि०** **दे०** **ख़्वाहम-ख़्वाह.**

ख़ामी, **स्त्री०** ಅಪಕ್ವತೆ; ಅಪೂರ್ಣತೆ.

ख़ामोश, **वि०** ಮೌನವಾಗಿರುವ.

ख़ामोशी, **स्त्री०** ಮೌನ.

ख़ायन, **पु०** ಮತ್ತೊಬ್ಬರ ವಸ್ತುವನ್ನು ದುರುಪಯೋಗಮಾಡುವವ.

ख़ाया, पु० ಅಂಡಕೋಶ.

ख़ाया-बरदारी, स्त्री० ಅತ್ಯಂತ ಹೆಚ್ಚಾದ ಮುಖಸ್ತುತಿ.

ख़ार, स्त्री० ಧೂಳು; ಬೂದಿ.

ख़ार, पु० ಮುಳ್ಳು; ಕಂಟಕ; ದ್ವೇಷ; ಮತ್ಸರ;—**खाना** ದ್ವೇಷಿಸು; —**गुज़रना** ಕೆಟ್ಟದೆನಿಸು.

खारा, वि० ಉಪ್ಪಾದ; ಚೌಳು.

ख़ारिज, वि० ಬಹಿಷ್ಕೃತ; ಹೊರಗೆ ಹಾಕಲ್ಪಟ್ಟ; ಬೇರೆಮಾಡಿದ.

खारिश, स्त्री० ಕಜ್ಜಿ; ತುರಿ.

खारी, वि० ಕ್ಷಾರವಾದ; ಚೌಳು.

खाल, स्त्री० ತೊಗಲು; ಚರ್ಮ; ತಿದಿ; ತಗ್ಗಿನಲ್ಲಿರುವ ಜಮೀನು; —**उड़ाना या उधेड़ना** ಚರ್ಮ ಸುಲಿದು ಹೋಗುವಂತೆ ಹೊಡೆ.

खालसा, वि० ಏಕಾಧಿಕಾರವುಳ್ಳ; ಸರಕಾರಿ; ಸಿಖ್‌ಜಾತಿಯ ಒಂದು ಒಳಪಂಗಡ.

खाला, वि० ತಗ್ಗಾದ; ನಿಮ್ನ.

ख़ाला, स्त्री० ಚಿಕ್ಕಮ್ಮ;—**जी का घर** ಬಹಳ ಸುಲಭವಾದ ಕಾರ್ಯ.

ख़ालिक, स्त्री० ಸೃಷ್ಟಿಕರ್ತ.

ख़ालिस, वि० ಪರಿಶುದ್ಧ; ನಿರ್ಮಲ.

ख़ाली, वि० ಬರಿದು; ರಿಕ್ತ; ಖಾಲಿ. क्रि० ಕೇವಲ; ಬರೀ;—**बैठना** ಉದ್ಯೋಗವಿಲ್ಲದೆ ಕಾಲಹರಣ ಮಾಡು.

ख़ालू, पु० ತಾಯಿಯ ತಂಗಿಯ ಗಂಡ; ಚಿಕ್ಕಪ್ಪ.

ख़ाविंद, पु० ಗಂಡ; ಯಜಮಾನ.

ख़ास, वि० ವಿಶೇಷ.

ख़ासक़लम / **ख़ासनवीस** } पु० ಆಪ್ತ ಕಾರ್ಯದರ್ಶಿ; ಪ್ರೈವೇಟ್ ಸೆಕ್ರೆಟರಿ.

ख़ासकर, वि० ವಿಶೇಷವಾಗಿ.

ख़ासगी, वि० ರಾಜನ ಅಥವಾ ಯಜಮಾನನ ಸ್ವಂತ; ಖಾಸಗಿ.

ख़ासतराश, पु० ರಾಜಮಹಾರಾಜರ ಕ್ಷೌರಿಕ; ಅರಮನೆ ಹಜಾಮ.

ख़ासदान, पु० ತಾಂಬೂಲದ ಪೆಟ್ಟಿಗೆ.

ख़ासबरदार, पु० ರಾಜನ ಸವಾರಿಯ ಮುಂದೆಮುಂದೆ ನಡೆಯುವ ರಾಜಭಟ.

ख़ासमहाल, पु० ಸರಕಾರದ ವಶದಲ್ಲಿರತಕ್ಕ ಜಮೀನ್ದಾರಿ; ಸರಕಾರಿ ಜಮೀನು.

ख़ासा, वि० ಉತ್ತಮ; ಸುಂದರವಾದ; ಪೂರ್ಣ.

ख़ासियत, स्त्री० ಪ್ರಕೃತಿ; ಸ್ವಭಾವ.

खासिया, स्त्री० ಅಸಾಮುದೇಶದ ಕಾಡು.

खाह, अव्य० दे० **ख्वाह.**

ख़ाहनख़ाह / **खाहमख़ाह** } क्रि० दे० **ख़्वाहम ख़्वाह.**

खाहाँ, वि० दे० **ख़्वाहाँ.**

खाहिश, स्त्री० ಅಭಿಲಾಷೆ.

खिंच, स्त्री० ಎಳೆಯುವಿಕೆ; ಎಳೆತ.

खिंचना, अ० ಎಳೆದುಹೋಗು; ಆಕರ್ಷಿತವಾಗು.

खिंचवाना, ಸಂ ಎಳೆಯಿಸು.
खिंचाना, ಸಂ ದೇಂ खिंचवाना.
खिंचाव, ಪುಂ ಎಳೆಯುವಿಕೆ; ಎಳೆತ.
खिंदड़ी, ಸ್ತ್ರೀಂ ಚಿಂದಿಗಳಿಂದ ಹೊಲಿದ ಹಾಸಿಗೆ.
खिचड़ी, ಸ್ತ್ರೀಂ ಹುಗ್ಗಿ; ಪೊಂಗಲು.
खिजना, ಅಂ ಕೋಪಿಸು; ಸಿಡಿಮಿಡಿಗೊಳ್ಳು.
खिजलाना, ಸಂ ಕಾಡು; ಹಿಂಸಿಸು; ರೇಗಿಸು.
खिज़ाँ, ಸ್ತ್ರೀಂ ಎಲೆಗಳು ಉದುರುವ ಕಾಲ; ಶರತ್ಕಾಲ.
खिज़ाब, ಪುಂ ನೆರೆಗೂದಲನ್ನು ಕಪ್ಪಗೆ ಮಾಡುವ ಮದ್ದು.
खिजालत, ಸ್ತ್ರೀಂ ನಾಚಿಕೆ; ಸಂಕೋಚ; ಸಿಗ್ಗು.
खिझाना, ಸಂ ಸಿಟ್ಟಿಗೆಬ್ಬಿಸುವುದು.
खिड़की, ಸ್ತ್ರೀಂ ಕಿಡಿಕಿ; ಕಿಟಕಿ; ಕೋಟೆಯ ಹಿಂಬಾಗಿಲು.
ख़िताब, ಪುಂ ಪದವಿ; ಬಿರುದು.
ख़िताबी, ವಿಂ ಪದವೀಧರ.
खित्ता, ಪುಂ ಪ್ರಾಂತ್ಯ; ದೇಶ.
ख़िदमत, ಸ್ತ್ರೀಂ ಸೇವೆ; ಶುಶ್ರೂಷೆ; **—गुज़ार** ಸ್ವಾಮಿಭಕ್ತ.
ख़िदमतगार, ಪುಂ ಸೇವಕ.
ख़िदमतगारी, ಸ್ತ್ರೀಂ ಸೇವೆ.
ख़िदमती, ವಿಂ ಸೇವೆಮಾಡುವವನು; ಸೇವಾಸಂಬಂಧವಾದ.
खिन, ಪುಂ ಕ್ಷಣ; ನಿಮಿಷ.
खिन्न, ವಿಂ ಉದಾಸೀನ; ದುಮ್ಮಾನ.
खियाना, ಅಂ ಸವೆದುಹೋಗು.
ख़िरद, ಸ್ತ್ರೀಂ ಬುದ್ಧಿ.
ख़िरदमन्द, ವಿಂ ಬುದ್ಧಿವಂತ.
ख़िरमन, ಪುಂ ಕಣ; ಧಾನ್ಯರಾಶಿ.
ख़िराज, ಪುಂ ಕಂದಾಯ.
ख़िलअत, ಸ್ತ್ರೀಂ ಬಹುಮಾನವಾಗಿ ಕೊಡತಕ್ಕ ಉಡುಗೊರೆ; ಖಿಲ್ಲತ್ತು.
ख़िलक़त, ಸ್ತ್ರೀಂ ಸೃಷ್ಟಿ; ಗುಂಪು.
ख़िलत, ಸ್ತ್ರೀಂ ದೇಂ ख़िलअत.
खिलना, ಅಂ ಅರಳು; ವಿಕಸಿತವಾಗು ಶೋಭಿಸು.
ख़िलवत, ಸ್ತ್ರೀಂ ಏಕಾಂತ.
ख़िलवतख़ाना, ಪುಂ ಸ್ಥಾನ; ಗುಪ್ತ ಭೇದಗಳಿಲ್ಲದ ಸ್ಥಳ.
खिलवाड़, ಪುಂ ದೇಂ खेलवाड़.
खिलवाना, ಸಂ ಊಟಮಾಡಿಸು; ತಿನ್ನಿಸು; ಅರಳಿಸು.
खिलाई-पिलाई, ಸ್ತ್ರೀಂ ಅನ್ನ ನೀರಿನ ಏರ್ಪಾಡು.
खिलाड़ / **खिलाड़ी** } ಪುಂ ಆಟಗಾರ.
खिलाना, ಸಂ ಆಟವಾಡಿಸು; ಊಟ ಮಾಡಿಸು.
ख़िलाफ़, ವಿಂ ವಿಪರೀತ; ವಿರುದ್ಧ.
ख़िलाफ़त, ಸ್ತ್ರೀಂ ಖಲೀಫನ ಪದವಿ.
खिलाल, ಸ್ತ್ರೀಂ (ಇಸ್ಪೀಟು ಆಟದಲ್ಲಿ) ಪೂರಾಸೋಲು.
खिलौना, ಪುಂ ಆಟದಸಾಮಾನು; ಆಟ. **हाथ का खिलौना** ಕೈಗೊಂಬೆ; ಸೂತ್ರದ ಗೊಂಬೆ.

खिल्ली, **स्त्री०** ಹಾಸ್ಯ; ತಮಾಷೆ; ಪಾನಪಟ್ಟಿ. **पु०** ಬೀಡ.

खिश्त, **स्त्री०** ಇಟ್ಟಿಗೆ; ಕಿಸ್ತು.

खिसकना, **अ०** ಮೆಲ್ಲಮೆಲ್ಲನೆ ಸರಿ; ಜಾರು.

खिसकाना, **स०** ಸರಿಯಿಸು.

खिसलना, **अ०** ಜಾರು; ಸರಿ.

खिसिआना, **अ०** ನಾಚಿಕೆಪಡು; ಕೋಪಿಸು.

खींच, **स्त्री०** ಎಳೆಯುವಿಕೆ.

खींचतान, **स्त्री०** ಎಳೆದಾಟ.

खींचना, **स०** ಎಳೆ; ಜಗ್ಗು; ಹೀರುವುದು.

खींचाखींची, **स्त्री०** ಹಿಂದಕ್ಕೂ ಮುಂದಕ್ಕೂ ಎಳೆಯುವಿಕೆ; ಜಗ್ಗಾಟವ ಲ್ಲಾಟ.

खींचातानी, **स्त्री०** ಎಳೆದಾಟ; ಯಾವುದಾದರೊಂದು ಮಾತಿಗೆ ಇಲ್ಲದ ಅರ್ಥವನ್ನು ಕಲ್ಪಿಸುವುದು.

खीखर, **पु०** ಒಂದು ಜಾತಿಯ ನರಿ.

खीज, **स्त्री०** ಕೋಪ; ಸಿಡಿಮಿಡಿ; ಗೊಳ್ಳುವಿಕೆ.

खीजना **अ०** ಕೋಪಿಸು; ಸಿಡಿಮಿಡಿಗೊಳ್ಳು.

खीझ, **स्त्री०** **दे०** **खीज.**

खीझना, **अ०** **दे०** **खीजना.**

ख़ीमा, **पु०** ಡೇರೆ.

खीर, **स्त्री०** ಪಾಯಸ; ಹಾಲು.

खीरा, **पु०** ಸೌತೆಕಾಯಿ.

खीरी, **स्त्री०** ಕೆಚ್ಚಲು.

खील, **स्त्री०** ಮಂಡಕ್ಕಿ; ಅರಳು.

खीली, **स्त्री०** ವಿಳೇದೆಲೆಯ ಪಟ್ಟಿ.

खीस, **वि०** ನಷ್ಟವಾದ.

खीसना, **अ०** ಹಲ್ಲು ಕಿಸಿ.

खीसा, **पु०** ಚೀಲ; ಕಿಸೆ.

खुंदाना, **स०** ಹಾರಿಸು.

खुआरी, **स्त्री०** ಅಪಮಾನ; ಅಗೌರವ.

खुखड़ी / **खुखरी** **स्त्री०** ನೆಪಾಳಿಗಳ ಚೂರಿ; ನೂಲಿನ ಉಂಡೆ.

खुक्ख, **वि०** ಒಣ; ಶೂನ್ಯ; ಬರಿದು.

ख़ुगीर, **पु०** ಕುದುರೆಯ ಜೀನು; **~की भर्ती** ಅನವಸರವಾದ ಜನಸಂದಣಿ; ಅನಾವಶ್ಯಕ ವಸ್ತು ಸಂಗ್ರಹ.

खुचर / **खुचुर** **स्त्री०** ಸುಳ್ಳುಸುಳ್ಳೇ ದೋಷಾರೋಪಣೆ ಮಾಡುವುದು.

खुजलाना, **स०** ತುರಿ; ಉಗುರಿನಿಂದ ಕೆರೆಯುವುದು.

खुजली, **स्त्री०** ತುರಿ; ನವೆ; ತೀಟೆ; ಕಜ್ಜಿ.

खुटकना, **स०** ಯಾವುದಾದರೊಂದು ವಸ್ತುವಿನ ತುದಿಯನ್ನು ಮೇಲಿಂದಮೇಲೆ ಗಿಳ್ಳುವುದು.

खुटका, **पु०** **दे०** **खटका.**

खुटचाली, **वि०** ಕೆಟ್ಟ ನಡತೆಯ; ದುರಾಚಾರಿ; ದುಷ್ಟ.

खुट्टी, **स्त्री०** ಹುಣ್ಣಿನ ಮೇಲಿನ ಹುಕ್ಕಳೆ; ಹುರುಕು.

ख़ुतबा, **पु०** ಸ್ತುತಿ; ಪ್ರಶಂಸೆ; ರಾಜನನ್ನು ಕೊಂಡಾಡುವುದು.

ख़ुतूत, ಪು॰ ಪತ್ರಗಳು.(**ख़त का बहु॰**)
ख़ुद, ವಿ॰ ತನ್ನ; ಸ್ವಂತ; ಸ್ವಯಂ; ಖುದ್ದಾಗಿ—**बख़ुद** ತಾನೇ.
ख़ुदकुशी, ಸ್ತ್ರೀ॰ ಆತ್ಮಹತ್ಯೆ.
ख़ुदगरज़, ವಿ॰ ಸ್ವಾರ್ಥಿ; ಸ್ವಾರ್ಥಪರ.
ख़ुदगरज़ी, ಸ್ತ್ರೀ॰ ಸ್ವಾರ್ಥ.
खुदना, ಅಂ॰ ಅಗೆಯಲ್ಪಡು; ಕೊರೆಯಲ್ಪಡು; ಕೆತ್ತಲ್ಪಡು.
ख़ुदनुमा, ವಿ॰ ಜಂಭಗಾರ; ಡಾಂಬಿಕ; ಅಹಂಕಾರಿ.
ख़ुदपरस्त, ವಿ॰ ಜಂಭಕೊಚ್ಚುವವ; ಬಡಾಯಿ ಖೋರ.
ख़ुदपरस्ती, ಸ್ತ್ರೀ॰ ಅಹಂಕಾರ; ಅಹಂಭಾವ.
ख़ुदमुख़्तार, ವಿ॰ ಸ್ವತಂತ್ರವಾದ.
खुदरा, ಪು॰ ಚಿಲ್ಲರೆ ಸಾಮಾನುಗಳು; ಚಿಲ್ಲರೆ ಪದಾರ್ಥಗಳು;—**कराना** ಚಿಲ್ಲರೆ ಮಾಡಿಸುವುದು.
खुदवाई, ಸ್ತ್ರೀ॰ ಅಗೆಯಿಸುವ ಕೆಲಸ; ಅಗೆಯಿಸಿದುದರಮಜೂರಿ.
खुदवाना, ಸ॰ ಅಗೆಯಿಸು.
खुदसर, ವಿ॰ ಯಾರ ಅಧೀನಕ್ಕೂ ಒಳಪಡದ; ಸ್ವೇಚ್ಛಾಚಾರಿ.
खुदा, ಪು॰ ದೇವರು;—**न ख़्वास्ता** ದೇವರುಹಾಗೆ ಮಾಡದಿರಲಿ; —**ख़ुदा करके** ಬಹಳಕಷ್ಟಪಟ್ಟು; —**की मार** ದೈವಶಾಪ.
खुदाई, ಸ್ತ್ರೀ॰ ಅಗಿಯುವಿಕೆ; ಅಗೆತ.
ख़ुदाई-ख़िदमतगार, ಪು॰ ದೇವರ ಸೇವಕ; ವಾಯುವ್ಯ ಸರಹದ್ದಿನ ಪ್ರಾಂತ್ಯದಲ್ಲಿನ ಒಂದು ಸ್ವಯಂ ಸೇವಕದಳ.
ख़ुदातर्स, ಪು॰ ದೈವಭೀರು.
ख़ुदा-ताला, ಪು॰ ಈಶ್ವರ.
ख़ुदा-दाद, ವಿ॰ ದೇವರಿಂದ ಕೊಡಲ್ಪಟ್ಟ; ಈಶ್ವರದತ್ತ.
ख़ुदा-परस्त, ವಿ॰ ಭಗವಂತನನ್ನು ಪೂಜಿಸುವವ; ಉಪಾಸಕ; ಆಸ್ತಿಕ.
ख़ुदावन्द, ಪು॰ ಒಡೆಯ; ಸ್ವಾಮಿ.
ख़ुदा-हाफ़िज़, ಪು॰ ಭಗವಂತನು ನಿನ್ನನ್ನು ರಕ್ಷಿಸಲಿ.
ख़ुदी, ಪು॰ ಅಹಂಭಾವ; ಅಹಂಕಾರ; ಹೆಮ್ಮೆ.
खुद्दी, ಸ್ತ್ರೀ॰ ಅಕ್ಕಿಯ ನುಚ್ಚು.
ख़ुनक, ವಿ॰ ಬಹಳ ತಣ್ಣಗಿರುವ; ತಂಪಾದ.
ख़ुनकी, ಸ್ತ್ರೀ॰ ಚಳಿ; ತಂಪು.
खुनखुना, ಪು॰ ಹುಡುಗರ ಒಂದು ಬಗೆಯ ಆಟ.
खुनस, ಸ್ತ್ರೀ॰ ಕೋಪ; ಸಿಟ್ಟು.
खुनसाना, ಅಂ॰ ಕೋಪಗೊಳ್ಳು.
खुनसी, ವಿ॰ ಕ್ರೋಧಿ.
ख़ुफ़िया, ವಿ॰ ಬಹಿರಂಗವಲ್ಲದ.
ख़ुफ़िया-पुलीस, ಪು॰ ಗುಪ್ತಚರ.
खुभना, ಸ॰ ಹೊಗು; ನುಗ್ಗು; ಚುಚ್ಚು.
खुभी, ಸ್ತ್ರೀ॰ ಕರ್ಣಾಭರಣ; ಬೆಂಡೋಲೆ.

ख़ुम, पुं० ಮಡಿಕೆ;—**क़दा** पुं० ಹೆಂಡದಂಗಡಿ.

ख़ुमार, पुं० } ಮತ್ತು; ಅಮಲು.
ख़ुमारी, स्त्री० }

खुमी, स्त्री० ನಾಯಿಕೊಡೆ; ಹಲ್ಲಿಗೆ ಹಾಕಿಸುವ ಚಿನ್ನದವೊಳೆ; ಕೊಂಬುಕಳಶ.

खुरंड, स्त्री० ಗಾಯುಒಣಗಿದಹೊಕ್ಕು.

खुर, पुं० ಗೊರಸು; ಸೀಳಿದಗೊರಸು.

खुरखुरा, स्त्री० ನುಣುಪಾಗಿರದ; ಬಿರುಸು.

खुरखुराना, अ० ಗುರುಗುರೆಂದು ಸದ್ದಾಗು.

खुरचन, स्त्री० ತುರಿದು ತೆಗೆದದ್ದು; ಕೆರೆದು ತೆಗೆದದ್ದು.

खुरचना, स० ತುರಿ; ಕೆರಿ.

खुरचनी, स्त्री० ತುರಿಯುವ ಮಣೆ.

खुरचाल, स्त्री० ಕೆಟ್ಟಚಾಳಿ.

खुर्चाली, वि० ನೀಚ.

खुरजी, स्त्री० ದೊಡ್ಡಚೀಲ; ಕುದುರೆ ಸವಾರನ ಚೀಲ.

खुरदरा, वि० ಒರಟು; ಹರಿತವಿಲ್ಲದ.

खुरपा, पुं० ಹುಲ್ಲುಕೆತ್ತುವ ಪಾರೆ.

खुरमा, पुं० ಒಂದು ಬಗೆಯ ಭಕ್ಷ್ಯ.

ख़ुरशैद, पुं० ಸೂರ್ಯ.

ख़ुराक, स्त्री० ಆಹಾರ; ತಿಂಡಿ.

खुराकी, स्त्री० ಊಟಕ್ಕಾಗಿ ಕೊಟ್ಟ ಮಾಡುವ ಹಣ; ಭತ್ಯ.

खुराफ़ात, स्त्री० ಅರ್ಥವಿಲ್ಲದ ಮಾತು; ಬೈಗಳು.

खुरी, स्त्री० ಗೊರಸಿನ ಗುರುತು.

ख़ुर्द, वि० ಚಿಕ್ಕ; ಲಘು.

ख़ुर्दबीन, स्त्री० ದುರ್ಬೀನು; ದೂರದರ್ಶಕ ಯಂತ್ರ.

ख़ुर्दबुर्द, वि० ನಷ್ಟಭ್ರಷ್ಟವಾದ.

ख़ुर्दा, पुं० ಚಿಲ್ಲರೆ ವಸ್ತುಗಳು; ಹಣದ ಚಿಲ್ಲರೆ.

ख़ुर्दाफ़रोश, पुं० ಚಿಲ್ಲರೆ ವ್ಯಾಪಾರಿ.

ख़ुर्राट, वि० ಅನುಭವಿ; ಮುದುಕ; ಯುಕ್ತಿಗಾರ.

ख़ुर्राटा, पुं० ಗೊರಕೆ; ಗೊರಕೆಮಲ್ಲ.

खुलना, अ० ತೆರೆ; ಬಿಚ್ಚು; ಹೊರಪಡು. **खुलकर** ಚೆನ್ನಾಗಿ; ನಿರ್ಭಯವಾಗಿ; ಏನೂ ತಡೆಯಿಲ್ಲದೆ. **खुले आम, खुले ख़जाने, खुले मैदान या खुले बाज़ार** ಬಹಿರಂಗವಾಗಿ; ಎಲ್ಲರಮುಂದೆ.

खुलवाना, स० ತೆರೆಯಿಸು.

खुला, वि० ಪ್ರಕಟ; ಬಂಧನವಿಲ್ಲದ; ಸ್ಪಷ್ಟ.

खुलासा, पुं० ಸಂಕ್ಷಿಪ್ತವಿವರಣೆ. वि० ತಡೆಯಿಲ್ಲದ.

खुल्लमखुल्ला, क्रि० ಬಹಿರಂಗದಲ್ಲಿ.

ख़ुश, वि० ಸಂತೋಷವುಳ್ಳ; ಪ್ರಸನ್ನ; ಆನಂದಿತ.

ख़ुश.क़िस्मत, वि० ಭಾಗ್ಯವಾನ್.

ख़ुश-क़िस्मती, स्त्री० ಸೌಭಾಗ್ಯ.

ख़ुश-ख़त, वि० ಸುಂದರವಾದ ಅಕ್ಷರ ಬರೆಯುವವನು.

ख़ुश-ख़बरी, स्त्री० ಸಂತೋಷವಾರ್ತೆ.

ख़ुश-गंवार, वि० ಮನೋಹರ.
ख़ुश-दिल, वि० ಪ್ರಸನ್ನಚಿತ್ತ.
ख़ुशनवीस, पु० दे० **ख़ुशख़त**.
ख़ुशनवीसी, स्त्री० ಸುಂದರವಾದ ಅಕ್ಷರಗಳನ್ನು ಬರೆಯುವ ಕಲೆ.
ख़ुशनसीब, वि० ಭಾಗ್ಯಶಾಲಿ.
ख़ुशनसीबी, स्त्री० ಭಾಗ್ಯ.
ख़ुशनुमा, वि० ಸುಂದರವಾದ.
ख़ुशनूदी स्त्री० ಪ್ರಸನ್ನತೆ.
ख़ुशबू, स्त्री० ಸುಗಂಧ; ಪರಿಮಳ.
ख़ुशबूदार, वि० ಸುಗಂಧಿತವಾದ.
ख़ुशरंग, वि० ಹೊಳೆಯುವ ಬಣ್ಣ.
ख़ुशहाल, वि० ಸುಖ; ಸಂಪನ್ನ.
ख़ुशहाली, स्त्री० ಅನುಕೂಲಸ್ಥಿತಿ; ಉತ್ತಮವಾದ ಸ್ಥಿತಿ.
ख़ुशामद, स्त्री० ಮುಖಸ್ತುತಿ.
ख़ुशामदी, वि० ಹೊಗಳು ಭಟ್ಟ; —**टट्टू** ಇತರರನ್ನು ಹೊಗಳಿ ಹೊಟ್ಟೆತುಂಬಿಕೊಳ್ಳುವವ.
ख़ुशी, स्त्री० ಆನಂದ; ಸಂತೋಷ.
ख़ुशीख़ुशी, क्रि० ಸಂತೋಷವಾಗಿ; ಸಂತೋಷದಿಂದ.
ख़ुश्क, वि० ಒಣಗಿದ; ನೀರಸ.
ख़ुश्कसाली, स्त्री० ಅನಾವೃಷ್ಟಿ; ಬರ.
ख़ुश्की, स्त्री० ಒಣಗಿಹೋದ ಭೂಮಿ.
खुसर, पु० ಮಾವ.
खुसर-फसर, स्त्री० ಪಿಸಿಪಿಸಿಮಾತು.
खुसरू, पु० ಅರಸ; ಚಕ್ರವರ್ತಿ.
खुसिया, पु० ಅಂಡಕೋಶ.
ख़ुसूसन, क्रि० ವಿಶೇಷವಾಗಿ; ವಿಶೇಷತಃ.
ख़ुसूसियत, स्त्री० ವೈಶಿಷ್ಟ್ಯ.
ख़ूं-ख़ार } वि० ಕೊಲೆಪಾತಕ;
ख़ूं-ख़्वार } ಘಾತಕ; ಹಿಂಸಕ; ಕ್ರೂರ.
खूँट, वि० ಮೂಲೆ; ಪಕ್ಕ; ತಿರುಗಣೆ ಗೂಟ.
खूँटा, पु० ಗೂಟ; ದೊಡ್ಡಮೊಳೆ.
खूँटी, स्त्री० ಚಿಕ್ಕಮೊಳೆ; ಆಣಿ.
खूँदना, अ० ಹಾರುತ್ತ ನೆಗೆಯುತ್ತ ಓಡು; ಚಿಮ್ಮು.
ख़ूँरेज, वि० ಕೊಲೆಮಾಡುವವ; ಕೊಲೆಪಾತಕ.
ख़ूँरेज़ी, स्त्री० ರಕ್ತಹರಿಸುವುದು.
खूगर, वि० ಅಭ್ಯಾಸದ ಚಟವಿರುವ.
खूझा, पु० ಹಣ್ಣು, ಕಾಯಿಗಳಲ್ಲಿನ ಗುಂಜಿನಂತಹ ಭಾಗ.
ख़ून, पु० ರಕ್ತ; ನೆತ್ತರು;—**का प्यासा** ರಕ್ತಪಿಪಾಸು;—**सफ़ेद होना** ದಯೆಯಿಲ್ಲದೆ ಹೋಗು;—**सिर पर सवार होना** ಕೊಲ್ಲಲು ಸಿದ್ಧನಾಗು;—**पीना** ಕೊಂದುಹಾಕು.
ख़ून-आलूदा, वि० ರಕ್ತದಿಂದ ತೊಯ್ದ.
ख़ूनख़राबी, स्त्री० ರಕ್ತಪಾತ; ಕಡಿದಾಟಬಡಿದಾಟ.
ख़ूनख़्वार, वि० ರಕ್ತಪಿಪಾಸು; ಭಯಂಕರ; ನಿರ್ದಯ.
ख़ूनी, वि० ಕೊಲೆಪಾತಕ; ಘಾತಕ.
ख़ूब, वि० ಒಳ್ಳೆಯ; ಉತ್ತಮವಾದ.
ख़ूबरू, वि० ಸುಂದರವಾದ.

ख़ूबसूरत, वि० ಸುಂದರವಾದ.

ख़ूबसूरती, स्त्री० ಸೌಂದರ್ಯ.

ख़ूबी, स्त्री० ವೈಶಿಷ್ಟ್ಯ; ಒಳ್ಳೆಯ ಗುಣ; ಸೊಗಸು.

खूराक, स्त्री० दे० **खुराक**.

खूरिश, स्त्री० ಊಟ ಉಪಚಾರದ ಪದಾರ್ಥಗಳು.

खूसट } पु० ಅರಸಿಕ; ಶೂನ್ಯಹೃ
खूसर } ದಯ; ಮುದಿಹೆಗ್ಗಣ.

खेचर, पु० ಆಕಾಶಚಾರಿ; ನಕ್ಷತ್ರ; ಪಕ್ಷಿ; ದೇವತೆ; ಮೇಘ.

खेड़ा, पु० ಚಿಕ್ಕಹಳ್ಳಿ.

खेत, पु० ಹೊಲ; ಗದ್ದೆ; ಯುದ್ಧ ಭೂಮಿ.

खेतिहर, पु० ಒಕ್ಕಲಿಗ; ರೈತ.

खेती, स्त्री० ಕೃಷಿ; ಬೇಸಾಯ.

खेतीबारी, स्त्री० ಕೃಷಿ; ಬೇಸಾಯ.

खेद, पु० ದುಃಖ; ದಣಿವು; ಖಿನ್ನತೆ.

खेदना, स० ಶಿಕಾರಿಯನ್ನು ಬೆನ್ನಟ್ಟು; ಹೊಡೆದೋಡಿಸು.

खेदा, पु० ಬೇಟೆ; ಆನೆಹಿಡಿಯುವುದು; ಕೆಡ್ಡ.

खेना, स० ದೋಣಿ ನಡೆಯಿಸು; ಕಳೆ.

खेप, स्त्री० ಒಂದಾಳು ಹೊರುವ ಭಾರ; ಗಾಡಿ ಅಥವಾ ನಾವೆಯಲ್ಲಿ ಒಂದುಸಲದ ಪ್ರಯಾಣ.

खेपना, स० ಕಳೆ; ಕಾಲತಳ್ಳು.

खेमटा, पु० ಹನ್ನೆರಡು ಮಾತ್ರೆಗಳ ಒಂದು ತಾಳ.

ख़ेमा, पु० ಶಿಬಿರ; ಗುಡಾರ.

खेल, पु० ಆಟ; ಮನೋರಂಜಕವಾದ ವ್ಯಾಯಾಮ; ಕ್ರೀಡೆ.

खेलना, स० ಆಟವಾಡು.

खेलवाड़, पु० ಕ್ರೀಡೆ; ಮನೋರಂಜಕವಾದ ಆಟ; ತಮಾಷೆ.

खेलवाड़ी } वि० ಆಟಗಾರ; ವಿನೋ
खेलाड़ी } ದಶೀಲ; ಹಾಸ್ಯಪ್ರಿಯ.

खेलौना, पु० दे० **खिलौना**.

खेवट, पु० ಪಟೇಲನ ವಶದಲ್ಲಿರುವ ಪಟ್ಟಾದಾರರ ಖಾತೆ; ನಾವಿಕ.

खेवनहार, पु० ನಾವಿಕ; ಪಾರುಗಾಣಿಸುವವನು.

खेवा, पु० ನಾವಿಕನ ಮಜೂರಿ.

खेवाई, स्त्री० ದೋಣಿ ನಡಿಸುವಿಕೆ.

खेसारी स्त्री० ಒಂದು ಬಗೆಯ ಬಟಾಣಿ.

खेह, स्त्री० ಧೂಳು.

खैंचना, स० दे० **खींचना**.

ख़ैयाम, पु० ಡೇರೆ ಹೊಡೆಯುವವ.

खैर, पु० ಕಾಚು.

ख़ैर, स्त्री० ಕ್ಷೇಮ; ಒಳಿತು. अव्य० ಚಿಂತೆಯಿಲ್ಲ; ಪರವಾಯಿಲ್ಲ; ಅಸ್ತು.

ख़ैर-आफ़ियत, स्त्री० ಯೋಗಕ್ಷೇಮ.

ख़ैर-ख़्वाह, वि० ಹಿತೈಷಿ.

ख़ैर-ख़्वाही, स्त्री० ಹಿತಚಿಂತನೆ.

ख़ैर-मक़दम, पु० ಶುಭಾಗಮನ; ಸ್ವಾಗತ.

ख़ैरा, वि० ಕಾಚಿನ ಬಣ್ಣದ.

ख़ैरात, स्त्री० ಪುಣ್ಯ; ದಾನ.
ख़ैरियत, स्त्री० ಕ್ಷೇಮ; ಕುಶಲ.
खोंइयाँ, पु० ಸೀರೆಯ ಅಂಚು.
खोंखी, स्त्री० दे० **खाँसी.**
खोंचा, पु० ಪಕ್ಷಿಗಳನ್ನು ಹಿಡಿಯುವ ಅಂಟುಸವರಿದ ಕೋಲು.
खोंची, स्त्री० ಭಿಕ್ಷೆ.
खोटना, स० ಯಾವುದಾದರೂ ವಸ್ತುವನ್ನು ತುದಿಯಿಂದ ಮುರಿದುಕೊಳ್ಳು.
खोंता पु० ಪಕ್ಷಿಗಳಗೂಡು.
खोंसना, स० ತುರುಕು; ಹೊಗಿಸು.
खोई, स्त्री० ಕಬ್ಬಿನ ಸಿಪ್ಪೆ; ಹಿಪ್ಪೆ.
खोखला, वि० ಟೊಳ್ಳು; ಪೊಳ್ಳು.
खोगीर, पु० ಕುದುರೆಯ ಜೀನಿನ ಕೆಳಗೆ ಹಾಸುವ ಕವುದಿ; ಕೋಗೀರಿ.
खोज, स्त्री० ಹುಡುಕೋಣ; ಅನ್ವೇಷಣ; ಶೋಧನೆ; ಚಿನ್ಹೆ.
खोजना, स० ಪತ್ತೆಮಾಡು; ಹುಡುಕು.
खोजवाना, स० ಹುಡುಕಿಸು.
खोजा, पु० ಮುಸಲ್ಮಾನ ಅರಸರ ಅಂತಃಪುರದಲ್ಲಿ ಕಾವಲಿರುವ ನಪುಂಸಕ ವ್ಯಕ್ತಿ; ಕೊಜ್ಜಾ; ಸೇವಕ; ಸರದಾರ; ಮಾನವಂತ.
खोट, स्त्री० ಕುಂದು; ದೋಷ; ತಪ್ಪು; ಕೆಟ್ಟತನ.
खोटा, वि० ದೂಷಿತವಾದ; ಕೆಟ್ಟ.
खोदना, स० ಅಗೆ; ತೋಡು; ಕೆತ್ತು; ಕೆಣಕು.
खोदनी, स्त्री० ಮುಮ್ಮಟಿ, ಸಲಿಕೆ ಮುಂತಾದ ಅಗೆಯುವ ಆಯುಧಗಳು.
खोदवाना, स० ಅಗೆಯಿಸು.
खोदाई, स्त्री० ಅಗೆಯುವ ಕೆಲಸ; ಅಗೆದುದುರ ಮಜೂರಿ.
खोनचा, पु० ಫೇರಿಸುತ್ತುವವರ ಮಿಠಾಯಿ ಹರಿವಾಣ.
खोना, स० ಕಳಕೊಳ್ಳು; ಹಾಳುಮಾಡಿಕೊಳ್ಳು. अ० ಕಳೆದುಹೋಗು; ಹಾಳಾಗು.
खोपड़ा, पु० ತಲೆಬುರುಡೆ; ಕಪಾಲ; ತೆಂಗಿನಕಾಯಿ.
खोपड़ी, स्त्री० ತಲೆಬುರುಡೆ; ತಲೆ; ಕಪಾಲ;—**चाट जाना** ತಲೆಹರಟೆ ಮಾತನಾಡಿ ಸತಾಯಿಸು; —**चटकना** ಬಹಳ ಬಿಸಿಲು, ಬಾಯಾರಿಕೆ ಅಥವಾ ನೋವಿನಿಂದ ತಲೆ ತಿರುಗು.
खोभार, पु० ತಿಪ್ಪೆಗುಂಡಿ.
खोम, पु० ಸಮೂಹ.
खोय, स्त्री० ಸ್ವಭಾವ.
खोया, पु० ಹಾಲುಖೋವಾ.
खोर, स्त्री० ಇಕ್ಕಟ್ಟಾದ ಗಲ್ಲಿ; ಬೀದಿ.
खोरा, पु० ಬಟ್ಲು; ಗ್ಲಾಸು. वि० ಕುಂಟ; ಅಂಗಭಂಗವಾಗಿರುವ.
खोराक, स्त्री० ಭೋಜನಸಾಮಗ್ರಿ; ಆಹಾರ.

खोराकी, वि० ಹೊಟ್ಟೆಬಾಕ.
खोरि, स्त्री० ಇಕ್ಕಟ್ಟಾದ ಗಲ್ಲಿ; ದೋಷ; ಐಬು.
खोल, पु० ಮೇಲಿನ ಆವರಣ; ದಪ್ಪನಾದ ದುಪ್ಪಟಿ.
खोलना, स० ತೆರೆ; ಬಿಚ್ಚು; ಬಹಿರಂಗಪಡಿಸು.
खोवा, पु० ಹಾಲುಖೋವಾ.
खोह, स्त्री० ಗುಹೆ; ಕಂದರ.
खोही, स्त्री० ಎಲೆಗಳಿಂದ ಮಾಡಿದ ಕೊಡೆ; ಹೊಂಡ; ಗುಂಡಿ.
ख़ौफ़, पु० ಭಯ; ಹೆದರಿಕೆ.
ख़ौफ़-ज़दा, वि० ಭಯಪಟ್ಟ; ಭಯಭೀತ.
ख़ौफ़-नाक, पु० ಭಯಂಕರ.
खौर, स्त्री० ಗಂಧದ ಬೊಟ್ಟು; ತ್ರಿಪುಂಡ್ರ.
खौरा, पु० ಒಂದು ಜಾತಿಯ ಕಜ್ಜಿ ರೋಗ.
खौलना, अ० ಬಿಸಿಯೇರು; ಕುದಿಯು.
खौलाना, स० ಬಹಳ ಬಿಸಿಮಾಡು; ಕುದಿಸು.
ख्यात, वि० ಪ್ರಸಿದ್ಧ; ವಿದಿತವಾದ.
ख्याति, स्त्री० ಪ್ರಸಿದ್ಧಿ; ಪ್ರಖ್ಯಾತಿ.
ख़्याल, पु० ವಿಚಾರ; ಅಭಿಪ್ರಾಯ; ಜ್ಞಾಪಕ;—**करना** ಯೋಚಿಸು; ಜ್ಞಾಪಿಸಿಕೊಳ್ಳು;—**रखना** ಜ್ಞಾಪಕದಲ್ಲಿಡು.
ख़्याली, वि० ಕಲ್ಪಿತ; ಹುಚ್ಚಾಟದ; ಖಯಾಲಿ;—**पुलाव** ನಡೆಯದ ಮಾತು; ಮನಸ್ಸಿನ ಮಂಡಿಗೆ.
ख़्वाजा, पु० ಯಜಮಾನ; ಮಾಲಿಕ; ಪ್ರಮುಖ; ಸುಪ್ರಸಿದ್ಧ ಪುರುಷ; ದೊಡ್ಡ ವ್ಯಾಪಾರಿ; ಮುಸಲ್ಮಾನರ ಶ್ರೇಷ್ಠ ಸಾಧು; ಅಂತಃಪುರದ ನಪುಂಸಕ ಭೃತ್ಯರು.
ख़्वान, पु० ದೊಡ್ಡ ತಟ್ಟೆ.
ख़्वानचा, पु० दे० **खोनचा**.
ख़्वाब, पु० ಕನಸು; ನಿದ್ರೆ.
ख़्वार, वि० ಹಾಳು; ಸರ್ವನಾಶ; ತಿನ್ನುವವ.
ख़्वारी, स्त्री० ನಷ್ಟ; ತಿರಸ್ಕಾರ; ಅಪಮಾನ.
ख़्वास्तगार, पु० ಅಪೇಕ್ಷಕ; ಬಯಸುವಾತನು; ಅರ್ಜೀದಾರ.
ख़्वाह, अव्य० ಅಥವಾ; ಇಲ್ಲವಾದರೆ.
ख़्वाहम-ख़्वाह, क्रि० ಬೇಕಾಗಲಿ ಬೇಡವಾಗಲಿ; ಸುಮ್ಮಸುಮ್ಮನೆ.
ख़्वाहाँ, वि० ಅಪೇಕ್ಷಕ; ಬಯಸುವವನು; ಅನುರಾಗಿ.
ख़्वाहिश, स्त्री० ಅಭಿಲಾಷೆ; ಬಯಕೆ.
ख़्वाहिशमन्द, वि० ಬಯಸುವವ; ಅಪೇಕ್ಷಕ.

ग

गंगा-जमनी, वि० ಎರಡು ಬಣ್ಣದ; ಕಪ್ಪುಬಿಳು[illegible] ಮಿಶ್ರವಾದ.

गंगाजली, स्त्री० ತೀರ್ಥಯಾತ್ರಿಗಳ ಗಂಗಾಪಾತ್ರೆ ;—**उठाना** ಗಂಗಾ ನದಿಯಮೇಲೆ ಆಣೆಯಿಡು.

गंगाल, पु० ನೀರಿಡುವ ದೊಡ್ಡ ಪಾತ್ರೆ ; ಗಂಗಾಳ.

गंगालाभ, पु० ಮರಣ ; ಸಾವು.

गंज, पु० ಒಂದು ವಿಧವಾದ ರೋಗ; ತಲೆಯ ಕೂದಲು ಉದರಿಹೋಗುವ ರೋಗ. स्त्री० ಖಜಾನೆ; ಗುಂಪು ; ಶೇಂದಿ ಅಂಗಡಿ.

गंजन, पु० ತಿರಸ್ಕಾರ ; ಭಂಗ.

गंजा, पु० ಬೋಳು ತಲೆಯುವ.

गंजिया, स्त्री० ನೂಲಿನಿಂದ ಹೆಣೆದ ಹಣದ ಚೀಲ.

गंजी, स्त्री० ಸಮೂಹ.

गंजीफ़ा, पु० ಮೂರು ಜನರು ಸೇರಿ ಆಡುವ ಒಂದು ಆಟ.

गंजेड़ी, वि० ಗಂಜಾವಿಮು ತಿನ್ನುವವನು.

गंठकटा, पु० ಹಣದ ಗಂಟು ಹಾರಿಸುವ ಕಳ್ಳ.

गंठबंधन } **गंठजोड़ा** } पु० ವಿವಾಹಕಾಲದ ಒಂದು ಪದ್ಧತಿ; ವಿವಾಹ ಬಂಧನ.

गंड, पु० ಕಪೋಲ ; ಗಲ್ಲ.

गंडस्थल, पु० ಕಪೋಲ ; ಕೆನ್ನೆ.

गंडा, पु० ಭೂತಪ್ರೇತಗಳ ಭಾಧೆಯನ್ನು ನಿವಾರಿಸಲು ಮಂತ್ರಿಸಿದ ನೂಲಿನ ಪಟ್ಟೆ. वि० ಲೆಕ್ಕಾಚಾರದಲ್ಲಿ ನಾಲ್ಕು ನಾಲ್ಕಾಗಿ ಎಣಿಸುವ ಕ್ರಮ.

गंडासा, पु० } **गंडासी,** स्त्री० } ಹುಲ್ಲು ಸೊಪ್ಪುಗಳನ್ನು ಕೊಚ್ಚುವ ಕತ್ತಿ ; ಕುಡಗೋಲು.

गंडेरी, स्त्री० ಕಬ್ಬಿನ ಚೂರು.

गंदगी, स्त्री० ಕೊಳಕು ; ಕೆಟ್ಟನಾತ.

गंदला, वि० ಮಲಿನ ; ಕೊಳಕಾದ ; ಹೊಲಸಾದ.

गंदा, वि० ಮಲಿನ ; ಅಶುದ್ಧ.

गंद्रुम, पु० ಗೋದುವೆ ; ಗೋಧಿ.

गंद्रुमी, वि० ಗೋದುವೆ ಬಣ್ಣದ.

गंध, स्त्री० ಪರಿಮಳ ; ಸುಗಂಧ.

गंधवह, पु० ಗಾಳಿ ; ಮೂಗು.

गंधवाह, पु० ವಾಯು ; ಗಾಳಿ.

गंधाना, स० ವಾಸನೆ ಅಥವಾ ನಾತ ಹುಟ್ಟಿಸು.

गंधी, पु० ಪರಿಮಳ ದ್ರವ್ಯಗಳನ್ನು ಮಾರುವವನು; ಅತ್ತರು ವ್ಯಾಪಾರಿ.

गंभीर, वि० ಆಳವಾದ; ಗೂಢ; ಪ್ರಶಾಂತ ; ಸೌಮ್ಯ.

गँवई, स्त्री० ಚಿಕ್ಕಹಳ್ಳಿ.

गँवर मसला, पु० ಹಳ್ಳಿಗರ ಗಾದೆ; ಗ್ರಾಮ್ಯ ಲೋಕೋಕ್ತಿ.

गँवाना, स० ಕಳಕೊಳ್ಳು.

गँवार, वि० ಅಸಭ್ಯ ; ಮೂರ್ಖ ;

गँवारी, स्त्री० ಅಸಭ್ಯತೆ; ಮೂರ್ಖತನ ; ಕುರೂಪವುಳ್ಳ.

गँवारू, वि० ಹಳ್ಳಿಯವನಂಥಾ ; ಕುರೂಪಿ.

गँसना, स० ಚೆನ್ನಾಗಿ ಬಿಗಿ; ಗಂಟಿಕ್ಕು.

गँसीला, वि० ಬಾಣದಂತೆ ಮೊನೆಯುಳ್ಳ; ಚುಚ್ಚುವಂತಹ.

गई करना, स० ಗಮನವಿಡದಿರು; ಹೋಗಗೊಡಿಸು.

गईबहोर, वि० ಕಳೆದುಹೋದುವನ್ನು ಹಿಂದಕ್ಕೆ ಕೊಡುವವನು ಅಥವಾ ಕೆಟ್ಟುಹೋದ ವಸ್ತುವನ್ನು ಸರಿಪಡಿಸುವವನು.

गऊ, स्त्री० ಹಸು; ಆಕಳು.

गगन, पु० ಆಕಾಶ.

गगनचुंबी } वि० ಬಹಳ ಎತ್ತರವಾದ.
गगनभेदी }

गगरा, पु० ಹಿತ್ತಾಳೆ, ತಾಮ್ರ, ಕಂಚು ಮೊದಲಾದ ಲೋಹದಿಂದ ಮಾಡಿದ ದೊಡ್ಡ ಪಾತ್ರೆ.

गगरिया } स्त्री० ತಾಮ್ರ; ಹಿತ್ತಾಳೆ ಅಥವಾ ಮಣ್ಣಿನ ಕೊಡ; ಬಿಂದಿಗೆ.
गगरी }

गच, पु० ಗಾರೆ; ಗಚ್ಚು.

गचकारी, स्त्री० ಗಾರೆಕೆಲಸ; ಗಚ್ಚಿನ ಕೆಲಸ.

गजगामिनी, स्त्री० ಆನೆಯಂತೆ ನಡೆಯುವವಳು (ಹೆಂಗಸು).

गज़, पु० ಮೂರಡಿ ಉದ್ದಳತೆ.

गज़क, पु० ಶೇಂದಿ ಕುಡಿದಮೇಲೆ ಬಾಯಿ ಕೆಟ್ಟುಹೋಗದಂತೆ ನಂಜಿಕೊಳ್ಳುವ ಪದಾರ್ಥ.

ग़ज़न-फ़र, पु० ಆಜಾನುಬಾಹು.

गजनाल, पु० ಫಿರಂಗಿ.

ग़ज़ब, पु० ಅನರ್ಥ; ಕೋಪ; ಅನ್ಯಾಯ; ವಿಚಿತ್ರವಾದ ಕಾರ್ಯ.

ग़ज़ब-का, पु० ವಿಲಕ್ಷಣವಾದ.

ग़ज़बनाक, वि० ಬಹಳ ಕೋಪಗೊಂಡ; ರೇಗಿದ.

गजर, पु० ಬೆಳಗ್ಗೆ ನಿದ್ದೆಯಿಂದೆಬ್ಬಿಸುವ ಗಂಟೆ.

गजरा, पु० ಮೂಲಂಗಿ ಸೊಪ್ಪು; ಹೂವಿನ ಮಾಲೆ; ಮಣಿಕಟ್ಟಿನ ಆಭರಣ.

ग़ज़ल, स्त्री० ಫಾರಸಿ ಅಥವಾ ಉರ್ದೂ ಭಾಷೆಗಳ ಶೃಂಗಾರ ರಸಪೂರ್ಣವಾದ ಕವಿತೆ.

गजारि, पु० ಸಿಂಹ.

गजाल, पु० ಜಿಂಕೆ ಮರಿ.

गज़ी, पु० ಸ್ವಲ್ಪ ಅಗಲಕಿರಿದಾದ ಒರಟು ಬಟ್ಟೆ.

गज्झा, पु० ರಾಶಿ; ಖಜಾನೆ; ಅಂಬಾರಿ.

गटकना, स० ಗುಳಕ್ಕನೆನುಂಗು; ತಿನ್ನು.

गटगट, पु० ಗಳಗಳನೆ ಕುಡಿಯುವಿಕೆ.

गटपट, स्त्री० ಪ್ರಾಣಸ್ನೇಹ.

गट्टा, पु० ಮಣಿಕಟ್ಟು; ಕಾಲಿನ ಹರಡು; ಗಂಟು; ಬೀಜ.

गट्ठर, पु० ದೊಡ್ಡ ಮೂಟೆ; ಹೊರೆ.

गट्ठा, पु० ಮೂಟೆ; ಹೊರೆ.

गठकटा, वि० ಗಂಟು ಕತ್ತರಿಸಿ ಹಣವನ್ನು ಕದಿಯುವವ.

गठजोरा } पुं० दे० **गँठजोड़ा.**
गठबंधन }

गठन, स्त्री० ನಿರ್ಮಾಣ; ರಚನೆ.

गठना, अ० ಗಠಿಸು; ಚೆನ್ನಾಗಿ ನಿರ್ಮಾಣವಾಗು; ಹೊಂದಿಕೆಯಾಗು; ಸ್ನೇಹ ಸೌಜನ್ಯವು ಬಹಳವಾಗು.

गठरी, स्त्री० ಬಟ್ಟೆಯಲ್ಲಿ ಕಟ್ಟಿದ ಮೂಟೆ; ಸಾಮಾನು ಗಂಟು; ಕೂಡಿಟ್ಟ ಧನ.

गठवाना } स० ನಿರ್ಮಾಣ ಮಾಡಿಸು; ಹೊಲಿಸು; ಜೋಡಿಸು.
गठाना }

गठित, वि० ನಿರ್ಮಿತವಾದ; ಹೊಂದಿಕೆಯಾದ.

गठिबंध, पुं० दे० **गँठजोड़ा.**

गठिया, स्त्री० ಗೋಣೀಚೀಲ; ಸಂಧಿವಾತ.

गठियाना, स० ಗಂಟುಹಾಕು; ಗಂಟಿನಲ್ಲಿಡು.

गठीला, वि० ಗೆಣ್ಣುಗಳುಳ್ಳ; ಸುಂದರವಾಗಿ ನಿರ್ಮಾಣ ಹೊಂದಿದ; ಶಕ್ತಿಶಾಲಿಯಾದ; ಚುರುಕಾದ.

गड़, पुं० ಕಂದಕ; ಹೊಂಡ; ಪ್ರಾಕಾರ.

गड़गड़, पुं० ಒಂದು ವಿಧವಾದ ಹುಕ್ಕ; ಗುಡುಗುಡಿ.

गड़गड़ाना, अ० ಗರ್ಜಿಸು; ಗುಡುಗುಡಾಯಿಸು; ಬಡಬಡ ಎಂದು ಒದರು.

गड़द्दार, पुं० ಮದ್ದಾನೆಯ ಮಾವುತ.

गड़ना, अ० ನಾಟು; ಕುಸಿ; ಹೂತುಹೋಗು; **गड़े मुर्दे उखाड़ना** ಕಳೆದುಹೋದ ಸಂಗತಿಗಳನ್ನು ಬಾರಿಬಾರಿ ಹೇಳುವುದು.

गड़पना, स० ತಿಂದುಬಿಡು; ನುಂಗು; ಇತರರ ವಸ್ತುವನ್ನು ಅನ್ಯಾಯವಾಗಿ ವಶಪಡಿಸಿಕೊಳ್ಳು.

गड़बड़, वि० ಹಳ್ಳತಿಟ್ಟಿನ; ಅಸ್ತವ್ಯಸ್ತ; ಕ್ರಮತಪ್ಪಿದ; ಯದ್ವಾತದ್ವಾ. स्त्री० ಗಡಿಬಿಡಿ; ಗಲಭೆ ಅವ್ಯವಸ್ಥೆ.

गड़बड़ाना, अ० ಗಾಬರಿಪಡು; ಅವ್ಯವಸ್ಥೆಗೀಡಾಗು.

गड़बड़िया, वि० ಅವ್ಯವಸ್ಥೆ ಮಾಡುವನು.

गड़बड़ी, स्त्री० ಗಡಿಬಿಡಿ.

गड़रिया, पुं० ಕುರುಬ.

गड़वा, पुं० ನೀರು ಕಡಿಯುವ ಚಿಕ್ಕ ಪಾತ್ರೆ; ಗಡಿಗೆ.

गड़वाना, स० ಹೂಳಿಸು.

गड़हा, पुं० ಹೊಂಡ; ಗುಣಿ.

गड़ही, स्त्री० ಚಿಕ್ಕಹೊಂಡ.

गड़ा, पुं० ರಾಶಿ.

गड़ाना, स० ನಾಟಿಸು; ಹೂಳಿಸು.

गड़ारी, स्त्री० ಮಂಡಲಾಕೃತಿಯ ರೇಖೆ; ವೃತ್ತ; ವಲಯ.

गड़ुआ, पुं० } ಹೂಜೆ.
गड़ुवा, पुं० }

गड़ेरिया, पुं० दे० **गड़रिया.**

गड्डा, ಪುಂ ಒಂದರ ಮೇಲೊಂದು ಬಿದ್ದಿರುವ ರಾಶಿ.

गड्डा, ಪುಂ ಎತ್ತಿನಗಾಡಿ; ನೂಲಿನ ಕಟ್ಟು; ದಾರದ ಉಂಡೆ.

गड्डी, ಸ್ತ್ರೀಂ ರಾಶಿ.

गड्ढा, ಪುಂ ದೇಂ **गढ़हा.**

गढंत, ವಿಂ ಕಲ್ಪಿತವಾದ; ಬನಾವಟಿ. ಸ್ತ್ರೀಂ ಕಲ್ಪಿತ ಸಮಾಚಾರ; ಮನೋರಾಜ್ಯದ ಮಾತು.

गढ़, ಪುಂ ಕೋಟೆ; ಕಿಲ್ಲೆ.

गढ़त } ಸ್ತ್ರೀಂ ರಚನೆ; ನಿರ್ಮಾಣ;
गढ़न } ಆಕೃತಿ.

गढ़ना, ಸಂ ಅಚ್ಚುಕಟ್ಟಾಗಿ ರೂಪಿಸು; ರಚಿಸು; ಕಪೋಲ ಕಲ್ಪಿತವಾದ ಮಾತನ್ನಾಡು; **बात गढ़ना** ಮಾತುಗಳನ್ನು ಸೃಷ್ಟಿಸು.

गढ़वाल, ಪುಂ ಕೋಟೆಯಮಾಲೀಕ.

गढ़ा, ಪುಂ ದೇಂ **गड़हा.**

गढ़ाई, ಸ್ತ್ರೀಂ ಅಚ್ಚುಕಟ್ಟಾಗಿ ರೂಪಿಸುವ ಕೆಲಸ ಅಥವಾ ಆ ಕೆಲಸದ ಮಜೂರಿ.

गढ़िया, ಪುಂ ರೂಪಿಸುವವನು.

गढ़ी, ಸ್ತ್ರೀಂ ಚಿಕ್ಕಕೋಟೆ ಅಥವಾ ಕೋಟೆಯು ಹಾಗೆ ಭದ್ರವಾದ ಮನೆ.

गढ़ैया, ವಿಂ ರೂಪಿಸುವವ; ಮಾಡುವವ; ಚಿಕ್ಕಗುಳಿ.

गण, ಪುಂ ಸಮೂಹ; ಗುಂಪು; ಶ್ರೇಣಿ; ಛಂದಃಶಾಸ್ತ್ರದಲ್ಲಿ ಮೂರು ವರ್ಣಗಳ ಸಮೂಹ.

गणक, ಪುಂ ಜ್ಯೋತಿಷಿ; ಜೋಯಿಸ.

गणन, ಪುಂ } ಲೆಕ್ಕ; ಗಣನೆ;
गणना, ಸ್ತ್ರೀಂ } ಸಂಖ್ಯೆ.

गणनीय, ವಿಂ ಗಣ್ಯ; ಪ್ರಸಿದ್ಧ; ಲೆಕ್ಕಿಸತಕ್ಕ.

गणिका, ಸ್ತ್ರೀಂ ಸೂಳೆ.

गणित, ಪುಂ ಲೆಕ್ಕ; ಗಣಿತ ಶಾಸ್ತ್ರ.

गण्य, ವಿಂ ಗೌರವಾರ್ಹ; ಪ್ರಸಿದ್ಧ.

गत, ವಿಂ ಕಳೆದ; ತೀರಿದ; ಹಿಂದಿನ; ರಹಿತವಾದ; ಖಾಲಿ. ಸ್ತ್ರೀಂ ರೂಪ; ಆಕೃತಿ; ಪರಿಸ್ಥಿತಿ; ದೆಸೆ; ಸದ್ಗತಿ; ದುರ್ಗತಿ; ಶ್ರಾದ್ಧ.

गतका, ಪುಂ ಕೋಲು; ಲಾಠಿವರಸೆ.

गतकुल, ಪುಂ ಉತ್ತರಾಧಿಕಾರಿಯಿಲ್ಲದ ಸಂಪತ್ತು.

गतांक, ಪುಂ ಹಿಂದಿನ ಸಂಚಿಕೆ.

गतागत, ವಿಂ ಬಂದುಹೋದ.

गति, ಸ್ತ್ರೀಂ ಗತಿ; ಗಮನ; ಅವಸ್ಥೆ; ಸ್ಥಿತಿ; ಪ್ರವೇಶ; ರೀತಿ; ಆಧಾರ.

गतिया, ಪುಂ ತಬಲೆಗಾರ.

गत्ता, ಪುಂ ರೊಟ್ಟು; ರಟ್ಟು.

गत्ताल-खाता, ಪುಂ ಗೊಡ್ಡು ಲೇವಾದೇವಿಯ ಲೆಕ್ಕಾಚಾರ; ವಸೂಲಾಗದ ಹಳೆಸಾಲದ ಲೆಕ್ಕಾಚಾರ.

गथ, ಪುಂ ಮೂಲಧನ; ಕೂಡಿಟ್ಟ ಹಣ.

गद, ಪುಂ ವಿಷ; ರೋಗ.

गदका, ಪುಂ ದೇಂ **गतका.**

ग़दर, ಪುಂ ವಿದ್ರೋಹ; ಬಂಡಾಯ; ದಂಗೆ.

गदराना, ಅಂ ಫಲಾದಿಗಳು ಹಣ್ಣಾಗು; ಯೌವನದಲ್ಲಿ ಮೈತುಂಬು; ಕಣ್ಣಿನಲ್ಲಿ ಗೀಜುಕಟ್ಟು.

गदला, ವಿಂ ಕೊಳಚೆ; ಕದಡಿದ.

गदहपचीसी, ಸ್ತ್ರೀಂ ೧೬ ರಿಂದ ೨೫ ನೆಯ ವಯಸ್ಸು; ಅಪಕ್ವ ಅನುಭವದ ವಯಸ್ಸು.

गदहपन, ಸ್ತ್ರೀಂ ಮೂರ್ಖತೆ; ತಿಳಿಗೇಡಿತನ.

गदहा, ಪುಂ ಕತ್ತೆ; ಗರ್ದಭ; ಮೂರ್ಖ; ವೈದ್ಯ.

गदा, ಸ್ತ್ರೀಂ ಗದೆ.

गदाई, ವಿಂ ತುಚ್ಛ; ಕ್ಷುದ್ರವಾದ. ಸ್ತ್ರೀಂ ಬಿಕ್ಷೆಬೇಡುವಿಕೆ.

गदेला, ಪುಂ ಹತ್ತಿ ಇಲ್ಲವೆ ಹಕ್ಕಿಯ ಗರಿಗಳಿಂದ ತಯಾರಿಸಿದ ಹೊದಿಕೆ ಅಥವಾ ಹಾಸಿಗೆ.

गद्‌गद, ಕ್ರಿಂ ಅತ್ಯಧಿಕವಾದ ಸಂತೋಷ, ಪ್ರೇಮ ಅಥವಾ ಶ್ರದ್ಧೆಯಿಂದ ಕೂಡಿದ.

गद्द, ಪುಂ ಗಟ್ಟಿಯಾದ ಅಥವಾ ಅಜೀರ್ಣಕಾರಿ ಪದಾರ್ಥವನ್ನು ತಿಂದರೆ ಹೊಟ್ಟೆಯೊಳಗಾಗುವ ಭಾರ ಮತ್ತು ಸಂಕಟ.

गद्दर, ವಿಂ ಅರೆಬೆಂದ.

गद्दा, ಪುಂ ಮೆತ್ತೆ; ಹಾಸಿಗೆ.

गद्दार, ಪುಂ ಬಂಡಾಯಗಾರ; ದೊಡ್ಡ ವಿದ್ರೋಹಿ; ಕ್ರಾಂತಿಕಾರ.

गद्दी, ಸ್ತ್ರೀಂ ಆಸನ; ಚಿಕ್ಕಮೆತ್ತೆ; ದಿಂಬು; ಪೀಳಿಗೆ;—**नशीन** ಸಿಂಹಾಸನದ ಮೇಲೆ ಕೂತ.

गद्यात्मक, ವಿಂ ಗದ್ಯರೂಪದಲ್ಲಿ ಬರೆಯಲ್ಪಟ್ಟ.

गनिका, ಸ್ತ್ರೀಂ ದೇಂ **गणिका.**

ग़नी, ವಿಂ ಧನವಂತ; ಹಣಗಾರ.

ग़नीम, ಪುಂ ದರೋಡೆಕಳ್ಳ; ಶತ್ರು.

ग़नीमत, ಸ್ತ್ರೀಂ ಕೊಳ್ಳೆಹೊಡೆದ ಹಣ; ಕಷ್ಟವಿಲ್ಲದೆ ಸಿಕ್ಕುವ ಸಂಪತ್ತು; ಬಹಳ ಸಂತೋಷದ ವಿಷಯ.

गन्दा, ವಿಂ ದೇಂ **गंदा.**

गन्ना, ಪುಂ ಕಬ್ಬು.

गन्नी, ಪುಂ ಗೋಣಿ; ಒಂದು ಜಾತಿಯ ಸಣಬು.

गप, ಸ್ತ್ರೀಂ ಸುಳ್ಳು ವರ್ತಮಾನ; ಗಾಳಿಸುದ್ದಿ.

गपशप, ಸ್ತ್ರೀಂ ಅಲ್ಲಿ ಇಲ್ಲಿಯಮಾತು; ಹರಟೆ.

गपकना, ಸಂ ಗಬಕ್ಕನೆ ನುಂಗಿಬಿಡು.

गपड़चौथ, ಪುಂ ಕೆಲಸಕ್ಕೆ ಬಾರದ ಮಾತು; ನಾಲ್ವರು ಸೇರಿಕೊಂಡು ಕೊಚ್ಚುವ ಹರಟೆ.

गपोड़ा, ಪುಂ ಅಸತ್ಯವಾರ್ತೆ; ಕಪೋಲ ಕಲ್ಪನೆ.

गपोड़ेबाजी, ಸ್ತ್ರೀಂ ಸುಳ್ಳುಪೊಳ್ಳುಹರಟೆ.

गप्प, ಸ್ತ್ರೀಂ ಹರಟೆ.

गप्पी, ವಿಂ ಹರಟೆಹೊಡೆಯುವವ; ಹರಟೆಮಲ್ಲ.

ग़फ़्फ़ा, ಪು॰ ದೊಡ್ಡ ಕವಳ; ದೊಡ್ಡ ತುತ್ತು; ಲಾಭ; ಫಾಯಿದೆ; **—मारना** ದೊಡ್ಡ ತುತ್ತು ನುಂಗು.
ग़फ़, ವಿ॰ ಗಟ್ಟಿಯಾದ; ಮಂದವಾದ.
ग़फ़लत, ಸ್ತ್ರೀ॰ ಅಜಾಗರೂಕತೆ; ಪ್ರಮಾದ; ತಪ್ಪು.
ग़फ़ीर, ವಿ॰ ಮುಚ್ಚುಮರೆ ಮಾಡುವ.
ग़फ़ूर, ಪು॰ ಕ್ಷಮಿಸುವವ.
ग़फ़्फ़ार, ವಿ॰ ದಯಾಳು; ಕ್ಷಮಾಗುಣವುಳ್ಳ.
ग़फ़्स, ವಿ॰ ದಪ್ಪನಾದ.
ग़बन, ಪು॰ ದ್ರವ್ಯಾಪಹಾರ; ಭಪಾವಣೆ.
गबरू, ವಿ॰ ಉಕ್ಕೇರುವ ಯೌವನದ; ಟೊಣಪ; ಸರಳಸ್ವಭಾವದ.
गब्बर, ವಿ॰ ಅಹಂಕಾರಿ.
गब्र, ಪು॰ ಅಗ್ನಿಪೂಜಕ.
गम, ಸ್ತ್ರೀ॰ ಪ್ರವೇಶ. ಪು॰ ದಾರಿ.
ग़म, ಪು॰ ಶೋಕ; ಚಿಂತೆ; ಯೋಚನೆ.
गमक, ಸ್ತ್ರೀ॰ ಪರಿಮಳ; ಸುವಾಸನೆ.
गमकना, ಅ॰ ಸುಗಂಧಕೊಡು.
गमकीला, ವಿ॰ ಸುವಾಸನೆಯುಳ್ಳ.
ग़मख़ोर, ವಿ॰ ತಾಳ್ಮೆಯುಳ್ಳ.
ग़मगीन, ವಿ॰ ದುಃಖಿತ; ಖಿನ್ನವಾದ.
ग़मगीनी, ಸ್ತ್ರೀ॰ ದುಃಖ; ವಿಷಾದ.
ग़मगुसार, ವಿ॰ ಇತರರ ದುಃಖವನ್ನು ಹೋಗಲಾಡಿಸುವ.
गमछा, ಪು॰ ಅಂಗವಸ್ತ್ರ.
ग़मज़दा, ವಿ॰ ದುಃಖಿತನಾದ.
ग़मनाक, ವಿ॰ ವಿಷಾದಕರ.
गमला, ಪು॰ ಹೂತೊಟ್ಟಿ.
गमाना, ಸ॰ ಕಳಕೊಳ್ಳು.
ग़मी, ಸ್ತ್ರೀ॰ ಶೋಕಾವಸ್ಥೆ ಮೃತ್ಯು.
ग़म्माज़, ವಿ॰ ಚಾಡಿಖೋರ.
गयंद, ಪು॰ ಆನೆ.
गया, ವಿ॰ ಹೋದ; ತೀರಿಹೋದ; **—गुज़रा या बीता** ದುರವಸ್ಥೆಗೀಡಾದ; ನಿಕೃಷ್ಟ; ಕಳಪೆ.
गयावाल, ಪು॰ ಗಯಾಕ್ಷೇತ್ರದಲ್ಲಿ ಶ್ರಾದ್ಧಮಾಡಿಸುವ ಬ್ರಾಹ್ಮಣ.
गर, ಪು॰ ಕೊರಳು; ಕುತ್ತಿಗೆ; ವಿಷ. ಅವ್ಯ॰ ರೆ; (**अगर**) ಪ್ರತ್ಯ॰ ಯಾವುದಾದರೂ ಕೆಲಸಮಾಡುವ; ಉದಾ: **सौदागर, कारीगर**.
ग़रक़, ವಿ॰ ಮುಳುಗಿಹೋದ; ಮಗ್ನವಾದ; ನಾಶವಾದ.
ग़रक़ाब, ಪು॰ ಮುಳುಗುವಿಕೆ.
ग़रक़ी, ಸ್ತ್ರೀ॰ ಮುಳುಗುವಿಕೆ; ಮುಳುಗು; ಅತಿವೃಷ್ಟಿ; ಜವುಗುನೆಲ.
गरगज, ಪು॰ ಮರಣದಂಡನೆಯ ಅಪರಾಧಿಯನ್ನು ನಿಲ್ಲಿಸುವ ಹಲಿಗೆ.
गरचे, ಅವ್ಯ॰ ಆದಾಗ್ಯೂ.
गरज, ಪು॰ ಶಬ್ದ; ಮೇಘದ ಅಥವಾ ಸಿಂಹದ ಗರ್ಜನೆ.
ग़रज़, ಸ್ತ್ರೀ॰ ಉದ್ದೇಶ; ಆವಶ್ಯಕತೆ; ಪ್ರಯೋಜನ; ಬಯಕೆ. ಕ್ರಿ॰ ಕೊನೆಗೆ; ಒಳ್ಳೆಯದು; ಚಿನ್ನ;

—का बावला ಸ್ವಾರ್ಥಸಾಧನೆಗಾಗಿ ಏನು ಬೇಕಾದರೂ ಮಾಡುವವನು;—यह कि ಅಂದರೆ, ಅರ್ಥಾತ್, ತಾತ್ಪರ್ಯವೇನಂದರೆ;—गाँठना ಸ್ವಪ್ರಯೋಜನವನ್ನು ಸಾಧಿಸು; अलग़रज़ ಒಟ್ಟಿನಲ್ಲಿ; ಸಂಕ್ಷೇಪದಲ್ಲಿ.

गरजन, ಪುಂ ಗರ್ಜನೆ; ತುಮುಲ ಧ್ವನಿ.

ग़रज़-मन्द, ವಿಂ ಆವಶ್ಯಕತೆಯುಳ್ಳವ; (ಏನಾದರೂ) ಬೇಕಾದವ.

गरजना, ಅಂ ಗರ್ಜಿಸು; ಸಿಟ್ಟಿನಿಂದ ಕೂಗ್ಯಾಡು.

ग़रज़ी, ವಿಂ ಸ್ವಕಾರ್ಯ ಧುರಂಧರ.

गरदन, ಸ್ತ್ರೀಂ ಕುತ್ತಿಗೆ; ಕೊರಳು; ಕತ್ತು;—नापना ಅವಮಾನಪಡಿಸು;—पर जुवा रखना ಬಹಳ ದೊಡ್ಡ ಕೆಲಸದ ಜವಾಬ್ದಾರಿಕೆಯನ್ನು ವಹಿಸು;—पर सवार होना ಬೆನ್ನು ಬಿಡದಿರು; ಜವಾಬ್ದಾರಿಕೆಯು ಬಹಳ ಹೆಚ್ಚಾಗು;—फँसना ಸಿಲುಕಿಹೋಗು;—मारना ಕೊಲ್ಲು;—हाथ में देना ಕತ್ತಿಗೆ ಕೈಹಾಕಿತಳ್ಳು ಅಥವಾ ಅಪಮಾನಮಾಡು.

गरदनियाँ, ಸ್ತ್ರೀಂ ಕತ್ತು ಹಿಡಿದು ತಳ್ಳುವುದು; ಅರ್ಧಚಂದ್ರ ಪ್ರಯೋಗ.

गरदनी, ಸ್ತ್ರೀಂ ಕುತ್ತಿಗೆಯ ಪಟ್ಟಿ; ಒಂದು ವಿಧವಾದ ಕಂಠಾಭರಣ.

गरदा, ಪುಂ ಧೂಳು; ಮಣ್ಣು.

गरदान, ವಿಂ ಸುತ್ತಿಸುತ್ತಿ ಒಂದೇ ಕಡೆಗೆ ಬರುವವ.

गरदिश, ಸ್ತ್ರೀಂ ದೇಂ गर्दिश.

गरदी, ಸ್ತ್ರೀಂ ತಿರುಗು; ಕ್ರಾಂತಿ.

गरदूँ, ಪುಂ ಆಕಾಶ.

गरब, ಪುಂ ದೇಂ गर्व.

ग़रब, ಪುಂ ಪಶ್ಚಿಮ.

गरबा, ಪುಂ ಗುಜರಾತಿ ಸ್ತ್ರೀಯರು ಹಾಡತಕ್ಕ ರಾಸಗೀತ; ಒಂದು ಬಗೆಯ ಗುಜರಾತು ದೇಶದ ನಾಟ್ಯ.

गरबीला, ವಿಂ ಅಭಿಮಾನಶಾಲಿಯಾದ; ಹೆಮ್ಮೆಯುಳ್ಳ.

गरभ, ವಿಂ ಗರ್ಭ; ಗರ್ವ.

गरभाना, ಅಂ ಗರ್ಭಿಣಿಯಾಗು; ಭತ್ತ ಗೋದಿಮೊದಲಾದ ಪೈರುಗಳಲ್ಲಿ ಮೊಸೆ ಹುಟ್ಟುವುದು.

गरभी, ವಿಂ ಅಭಿಮಾನಶಾಲಿ.

गरम, ವಿಂ ಬೆಚ್ಚನೆಯ; ಬಿಸಿಯಾದ; ಉಷ್ಣ; ಪ್ರಚಂಡ.

गरमागरमी, ಸ್ತ್ರೀಂ ಹುರುಪು; ಉತ್ಸಾಹ.

गरमागरम, ಪುಂ ಬಿಸಿಬಿಸಿ; ತಾಜಾ;—होना ಆವೇಶಗೊಳ್ಳು.

गरमाना, ಅಂ ಬಿಸಿಯಾಗು; ಕೋಪವುಂಟಾಗು; ಜಂಬ ಹೆಚ್ಚಾಗು. ಸಂ ಬಿಸಿಮಾಡು; ಕುದಿಸು.

गरमी, ಸ್ತ್ರೀಂ ಉಷ್ಣತೆ; ತಾಪ; ಉರಿ; ಆವೇಶ; ಕ್ರೋಧ; ಉತ್ಸಾಹ; ಬೇಸಗೆ; ರೋಗ.

गरल, ಪುಂ ಹಾವಿನ ವಿಷ.
गराँ, ವಿಂ ಅಮೂಲ್ಯ; ಬೆಲೆಯುಳ್ಳ.
गराँजान, ವಿಂ ಸಾವಿಗೆ ಸಮೀಪಿಸಿದ; ಸೋಮಾರಿ.
गराड़ी, ಸ್ತ್ರೀಂ ಗಾಲಿ; ಚಕ್ರದ ಗುರುತು.
गरानी, ಸ್ತ್ರೀಂ ಭಾರ; ಪ್ರಿಯ.
गरारा, ವಿಂ ಗರ್ವದಿಂದ ಕೂಡಿದ; ಪ್ರಚಂಡ; ಬಲವಾನ್.
गरिमा, ಸ್ತ್ರೀಂ ಗೌರವ; ಅಹಂಕಾರ; ಅಷ್ಟಸಿದ್ಧಿಗಳಲ್ಲಿ ಒಂದು; ಭಾರ.
गरिष्ठ, ವಿಂ ಸುಲಭವಾಗಿ ಜೀರ್ಣವಾಗದ; ಬಹಳ ಗಟ್ಟಿಯಾದ.
गरी, ಸ್ತ್ರೀಂ ತಿರಳು.
गरीक, ವಿಂ ಮುಳಗಿದ.
गरीज़, ಪುಂ ಸ್ವಭಾವ.
ग़रीब, ವಿಂ ಬಡವ; ದೀನ; ದರಿದ್ರ; —उलवतन ದೇಶಬಿಟ್ಟು ಪರದೇಶದಲ್ಲಿ ವಾಸಿಸುವ.
ग़रीब-निवाज़, ವಿಂ ಬಡವರಮೇಲೆ ದಯೆಯಿಡುವ.
ग़रीब-परवर, ಸ್ತ್ರೀಂ ದೀನ ರಕ್ಷಕ.
ग़रीबाना, ವಿಂ ಬಡವರಂತಹ.
ग़रीबी, ಸ್ತ್ರೀಂ ಬಡತನ; ಅಧೀನತೆ; ದಾರಿದ್ರ್ಯ.
गरीयस, ವಿಂ ಮಹಾನ್; ಮಹತ್ವಪೂರ್ಣವಾದ; ಪ್ರಬಲ.
गरुआ, ವಿಂ ದೊಡ್ಡ; ಭಾರವಾದ; ಗೌರವಸ್ಥ.
गरुआई, ಸ್ತ್ರೀಂ ಭಾರ; ದೊಡ್ಡಸ್ತಿಕೆ.
गरू, ವಿಂ ಭಾರವಾದ.
ग़रूर, ಪುಂ ಗರ್ವ; ಹೆಮ್ಮೆ; ಅಭಿಮಾನ.
ग़रूरी, ವಿಂ ಜಂಬಗಾರ; ಅಭಿಮಾನಶಾಲಿ.
गरेबान, ಪುಂ ಕತ್ತಿನಪಟ್ಟಿ; ಕೊರಳುಪಟ್ಟಿ; ಕಾಲರ್.
गरेरना, ಸಂ ಸುತ್ತುಬಳಸು; ಮುತ್ತು.
गरोह, ಪುಂ ಸಮೂಹ; ಗುಂಪು.
गर्क, ವಿಂ ಮಗ್ನ; ಮುಳುಗಿದ.
ग़र्ज़, ಸ್ತ್ರೀಂ ದೇಂ ग़रज़.
गर्जन, ಪುಂ ಗರ್ಜನೆ; ಭೀಕರವಾದ ಧ್ವನಿ.
गर्जना, ಅಂ ದೇಂ गरजना.
गर्त्त, ಪುಂ ಮಡು; ಗುಂಡಿ; ಜಲಾಶಯ.
ग़र्द, ಸ್ತ್ರೀಂ ಧೂಳು; ಬೂದಿ; —खोरा ಧೂಳು ಬಿದ್ದೂ ಸಹ ಕೆಡದ.
ग़र्द-खोर, ವಿಂ ಧೂಳಾದರೂ ಕೊಳೆ ಹತ್ತದ; ಧೂಳು ಒರೆಸುವ ಗೋಣಿತಟ್ಟು.
गर्दन, ಪುಂ ಕತ್ತು.
गर्दभ, ಪುಂ ಕತ್ತೆ.
गर्दालू, ಪುಂ ಅಲೂಬುಖಾರಾಹಣ್ಣು.
गर्दिश, ಸ್ತ್ರೀಂ ಸುತ್ತು; ಪ್ರದಕ್ಷಿಣೆ.
गर्ब, ಸ್ತ್ರೀಂ ದೇಂ गर्व.
गर्भ, ಪುಂ ಗಬ್ಬ; ಗರ್ಭ; ಬಸುರು.
गर्मी, ಸ್ತ್ರೀಂ ದೇಂ गरमी.
गर्व, ಪುಂ ಅಹಂಕಾರ.
गर्विता, ಪುಂ ನಿಜರೂಪ ಗುಣಾದಿಗಳಿಂದ ಸೊಕ್ಕಿದ ನಾಯಕಿ.

गर्वीला, वि० ದರ್ಪವುಳ್ಳ; ಹೆಮ್ಮೆ. ಯಿಂದ ಕೂಡಿದ.
गर्हण, पु० ದೂಷಣೆ.
गर्हणीय, वि० ನಿಂದನೀಯ.
गर्हित, वि० ನಿಂದಿಸಲ್ಪಟ್ಟ.
गर्ह्य, वि० ನಿಂದಾತ್ಮಕವಾದ.
गल, पु० ಕಂಠ; ಕೊರಳು. (**गला**)
गलकंबल, पु० ಗಂಗೆತೊಗಲು. (**सास्ना**)
गलगंज, पु० ಗಲಾಟೆ.
ग़लत, वि० ತಪ್ಪು; ಅಶುದ್ಧ; ಅಸತ್ಯ.
गल-तकिया, स्त्री० ಕೆನ್ನೆದಿಂಬು.
ग़लतफ़हमी, स्त्री० ತಪ್ಪು ತಿಳುವಳಿಕೆ; ಭ್ರಾಂತಿ.
ग़लतान, वि० ಹೊರಳುವ; ತಿರುಗುವ.
ग़लती, स्त्री० ತಪ್ಪು; ದೋಷ; ಮೋಸ; ಅಶುದ್ಧಿ.
गलथना, पु० ಮೇಕೆಯ ಕತ್ತಿನ ಮೊಲೆ.
गलना, अ० ಕರಗು; ಬೇಯು; ದ್ರವ ರೂಪವಾಗು.
गलफाँसी, स्त्री० ಫಾಸಿಯ ಶಿಕ್ಷೆ; ಗಲ್ಲಿಗೇರಿಸುವಿಕೆ.
गलबाँही, स्त्री० ಕತ್ತಿನ ಸುತ್ತ ಕೈ ಹಾಕಿ ಮಾಡುವ ಆಲಿಂಗನ.
गलबा, पु० ಆಧಿಕ್ಯ; ಪ್ರಾಧಾನ್ಯತೆ.
गलमुच्छा, पु० ಗಲ್ಲಮೀಸೆ; ಕೆನ್ನೆಯ ಅಥವಾ ಗಲ್ಲದ ಮೇಲಿನ ಕೂದಲು.
गलवाना, स० ಕರಗಿಸು.
गलसुआ, पु० ಕತ್ತಿನಬಳಿಯಬಾವು; ಕಳ್ಳಬಾವು.
गला, पु० ಕತ್ತು; ಕೊರಳು; ಕಂಠಧ್ವನಿ;—**आना** ಕತ್ತು ಊದಿಕೊಳ್ಳುವುದು;—**काटना** ಅನ್ಯಾಯಮಾಡು;—**छूटना** ಬಿಡುಗಡೆ ಹೊಂದು; **गले पड़ना** ಬೇಡವೆಂದಿದ್ದರೂ ಪ್ರಾಪ್ತವಾಗು; **गले मढ़ना** ಬಲವಂತದಿಂದ ಕತ್ತಿಗೆ ಕಟ್ಟು. **गले लगाना** ಆಲಿಂಗಿಸು.
गलाना, स० ಕರಗಿಸು; ಹಣ್ಣಾಗಿಸು.
गलावट, स्त्री० ಕರಗುವಿಕೆ.
गलित, वि० ಕರಗಿದ; ಶಿಥಿಲವಾದ; ಜೀರ್ಣವಾದ.
गलियारा, पु० ಇಕ್ಕಟ್ಟಾದ ಸಂದಿ ಅಥವಾ ಗಲ್ಲಿ.
गली, स्त्री० ಗಲ್ಲಿ; ಬೀದಿ; ಸಂದಿ; ಕೇರಿ.
गलीचा, पु० ರತ್ನಗಂಬಳಿ; ಜಮಖಾನೆ.
ग़लीज़, वि० ಕೊಳಕು; ಅಶುದ್ಧ. पु० ಕೊಳೆ; ಅಶುದ್ಧತೆ; ಮಲ.
गलेबाज़, वि० ಚೆನ್ನಾಗಿ ಹಾಡುವವನು; ಮಧುರವಾದ ಶಾರೀರ (ಕಂಠಧ್ವನಿ) ವುಳ್ಳವನು.
गल्प, स्त्री० ಹರಟೆ; ಜಂಭ; ಮಿಥ್ಯಾಪ್ರಲಾಪ; ಸಣ್ಣಕತೆ.

ग़ल्ला, पुं० ಸದ್ದು ; ಗುಲ್ಲು ; ಬೊಬ್ಬೆ ; ಗಲಾಟೆ ; ಸಮೂಹ ; ಗುಂಪು.

ग़ल्ला, पुं० ಧಾನ್ಯ ; ಕಾಳು ; ಬೆಳೆ ; ಅಂಗಡಿಯಲ್ಲಿ ದಿನಗಟ್ಟಳೆಯ ವ್ಯಾಪಾರದಿಂದ ಸಿಕ್ಕುವ ಹಣ ; ಧನರಾಶಿ.

गवँ, स्त्री० ಹೊಂಚು. (घात) ಪ್ರಯೋಜನ; ಉದ್ದೇಶ್ಯವು ಫಲಿಸುವ ಸಂದರ್ಭ;—से ಸಮಯ ನೋಡಿ.

गवाक्ष, पुं० ಚಿಕ್ಕ ಕಿಟಕಿ ; ಗವಾಕ್ಷಿ.

गवारा, वि० ಅನುಕೂಲವಾದ; ಮನವೊಪ್ಪುವ.

गवास, पुं० ಕಟುಕ. (कसायी)

गवाह, पुं० ಸಾಕ್ಷಿಗಾರ.

गवाही, स्त्री० ಸಾಕ್ಷ್ಯ.

गवेषणा, स्त्री० ಅನ್ವೇಷಣ ; ಹುಡುಕೋಣ ; ಶೋಧನೆ.

गवैया, पुं० ಗಾಯಕ; ಸಂಗೀತಗಾರ; ಗವಾಯಿ.

ग़श, पुं० ಸ್ಮೃತಿಹೀನತೆ ; ಮೂರ್ಛೆ.

ग़श्त, पुं० ಸುತ್ತುವಿಕೆ ; ತಿರುಗಾಡುವಿಕೆ.

ग़श्ती, वि० ಸುತ್ತುವವನು ; ಗಸ್ತೀ ತಿರುಗುವವನು. स्त्री० ವ್ಯಭಿಚಾರಿಣಿ ;—प्याला ರೋಲಿಂಗ್ ಕಪ್ಪು.

ग़श्ती-चिट्ठी, स्त्री० ಸುತ್ತೋಲೆ.

गसना, स० ಬಿಗಿಸು ; ಗಂಟಿಕ್ಕು.

गसीला, वि० ಬಿಗಿದ ; ಪೋಣಿಸಿದ.

गस्सा, पुं० ಗ್ರಾಸ ; ಕವಳ ; ತುತ್ತು.

गहकना, अ० ಬಹಳ ಆಸೆಪಡು ; ತವಕಿಸು.

गहगह / **गहगहा** वि० ಸಂತೋಷ ಮತ್ತು ಉತ್ಸಾಹದಿಂದ ತುಂಬಿರುವ.

गहगहाना, अ० ಸಂತೋಷದಿಂದ ಹಿರಿಹಿಗ್ಗು ; ಪೈರುಪಚ್ಚೆಗಳಿಂದ ಕಂಗೊಳಿಸು ; ಚಿಗುರು.

गहगहे, क्रि० ಬಹಳ ಸಂತೋಷದಿಂದ ; ಬಹಳ ಚೆನ್ನಾಗಿ.

गहन, वि० ಗಂಭೀರ ; ಆಳವಾದ. पुं० ಆಳ; ದುರ್ಗಮವಾದ ಸ್ಥಳ; ಗ್ರಹಣ. स्त्री० ಹಿಡಿತ ; ಹಟ; ಜಿದ್ದು ; ಆಭರಣ.

गहना, स्त्री० ಆಭರಣ. स० ಹಿಡಿದುಕೊಳ್ಳು ; ಧರಿಸು.

गहनी, स्त्री० ಹಿಡಿತ ; ಹಠ ; ಹಿಡಿ.

गहबर, वि० ವಿಷಮ ; ದುರ್ಗಮವಾದ ; ವ್ಯಾಕುಲಗೊಂಡ.

गहर, स्त्री० ವಿಳಂಬ ; ತಡ.

गहरा, वि० ಆಳವಾದ ; ಗಂಭೀರ ; ಅತ್ಯಧಿಕ ; ಪ್ರಚಂಡವಾದ ; —हाथ मारना ಯಥೇಷ್ಟವಾಗಿ ಹಣಗಳಿಸು.

गहराई, स्त्री० ಆಳ ; ಗಾಂಭೀರ್ಯ.

गहराना, अ० ಆಳವಾಗು ; ಕೋಪಗೊಳ್ಳು. स० ಆಳಮಾಡು.

गहलौत, पुं० ರಾಜಪೂತ ಕ್ಷತ್ರಿಯರ ಒಂದು ವಂಶ.

गहिरा, वि० दे० गहरा.

गहिराई, स्त्री० दे० गहराई.

गह्वर, पु० ಅಂಧಕಾರಮಯವಾದ ಸ್ಥಳ; ಗುಹೆ; ಕಂದರ; ಬಿಲ; ಗುಪ್ತಸ್ಥಳ; ಅರಣ್ಯ; ಉದ್ಯಾನ ವನ.

गाँछना, स० ಪೋಣಿಸು.

गांज, पु० ಕುಪ್ಪೆ; ರಾಶಿ.

गांजना, स० ರಾಶಿಮಾಡು.

गाँजा, पु० ಗಾಂಜಾ.

गाँठ, स्त्री० ಗಂಟು; ಮೂಟೆ; ಗಣಲು; ಗೆಣ್ಣು; ಕೊಣಿಕೆ; ವೈಮನಸ್ಯ; **—का पूरा** ಧನವಂತ; **—कट** ಜೇಬುಕಳ್ಳ.

गाँठगोभी, स्त्री० ಕೋಸುಗೆಡ್ಡೆ; ಹೂಕೋಸು.

गाँठना, स० ಗಂಟಿಕ್ಕು; ಜೋಡಿಸು; **मतलब गाँठना** ಪ್ರಯೋಜನವನ್ನು ಹೊಂದು; ಕಾರ್ಯಲಾಭವನ್ನು ನೋಡಿಕೊಳ್ಳು.

गाँड़, स्त्री० ಕುಂಡಿ; ಕುಂಡೆ; ಮುಕುಳಿ.

गाँडा, पु० ಮರದ ತುಂಡು.

गाँडू, वि० ಅಂಜುಬುರುಕ; ಹೇಡಿ.

गाँथना, स० ಪೋಣಿಸು; ದೂರದೂರ ಹೊಲಿಗೆಹಾಕು.

गाँधी, पु० ಗಂದಿಗೆ ಅಂಗಡಿಯವ; ಗುಜರಾತಿನಲ್ಲಿ ವೈಶ್ಯರ ಒಂದು ಜಾತಿ.

गाँभीर्य, स्त्री० ಗಂಭೀರತೆ; ಧೀರತನ.

गाँव / **गाँव** पु० ಹಳ್ಳಿ; ಗ್ರಾಮ.

गाँस, स्त्री० ಬಂಧನ; ತಡೆ; ದ್ವೇಷ; ರಹಸ್ಯ; ಗಂಟು; ಉರುಲು; **ಬಾಣ ಅಥವಾ ಬರ್ಛಿಯಮೊನೆ.**

गाँसना, स० ಚುಚ್ಚು; ನಾಟಿಸು; ವಶದಲ್ಲಿ ಇಟ್ಟುಕೊಳ್ಳು; ತುರುಕು.

गाँसी, स्त्री० ಬಾಣದ ತುದಿಮೊನೆ.

गाँहक, पु० दे० गाहक.

गागर / **गागरी** स्त्री० ಗಡಿಗೆ; ಬಿಂದಿಗೆ.

गाछ, पु० ಮರ; ಗಿಡ. (पेड़)

गाछी, स्त्री० ತೋಟ; ಉದ್ಯಾನವನ.

गाज, स्त्री० ಗರ್ಜನೆ; ಸಿಡಿಲು; ಗುಡುಗು. **पर गाज गिरना** ಸಂಕಟ ಒದಗು; ನಾಶವಾಗು.

गाजना, अ० ಗರ್ಜಿಸು; ಹುಂಕಾರ ಮಾಡು; ಕಿರಚು; ಆನಂದ ಪಡು.

गाजर, स्त्री० ಕೆಂಪು ಮೂಲಂಗಿ; ಗಾಜರು; **—मूली समझना** ತುಚ್ಛವಾಗಿಲೆಕ್ಕಿಸು.

ग़ाज़ा, पु० ಮುಖಕ್ಕೆ ಹಚ್ಚಿಕೊಳ್ಳುವ ಒಂದು ಬಗೆಯ ಪುಡಿ.

गाजाबाजा, पु० ವಾದ್ಯಗಳ ಘೋಷ; ಕೋಲಾಹಲ; ಗದ್ದಲ.

ग़ाज़ी, पु० ಧರ್ಮಕ್ಕಾಗಿ ಕಾದಾಡುವ ವೀರಪುರುಷ.

गाटा, पु० ಚಿಕ್ಕ ಹೊಲ.

गाड़, स्त्री० ಕುಣಿ; ಹಳ್ಳ; **ಹಗೇವು.**

गाड़ना, स० ಹೂಳು ; ಹೂತಿಡು ; ನೆಡು ; ಅಡಗಿಸು.

गाड़र, स्त्री० ಹೆಣ್ಣು ಕುರಿ.

गाड़ा, पु० ಬಂಡಿ ; ಎತ್ತಿನಗಾಡಿ.

गाड़ी, स्त्री० ಬಂಡಿ ; ಗಾಡಿ ; ಶಕಟ.

गाढ़, वि० ಬಹಳ ; ಅಧಿಕ ; ಗಟ್ಟಿ ; ಆಳ ; ಕಠಿಣ ; ದಪ್ಪ. पु० ಆಪತ್ತು ; ಸಂಕಟ.

गाढ़ा, वि० ದಪ್ಪ ; ಮಂದ ; ಗಾಢ ವಾದ ; ಘನಿಷ್ಟ ; ಪ್ರಚಂಡ ; **गाढ़ी छानना** ಚೆನ್ನಾಗಿ ಭಂಗಿ ಕುಡಿ ; ಗಾಢವಾದ ಸ್ನೇಹವುಂಟಾಗು. **गाढ़े में पड़ना** ಕಷ್ಟದಲ್ಲಿ ಸಿಕ್ಕಿಕೊಳ್ಳುವುದು.

गात, पु० ಅಂಗ ; ಶರೀರ ; ಗರ್ಭ.

गाता, पु० ಹಾಡುವವನು.

गाती, स्त्री० ಮೇಲು ವಸ್ತ್ರ ; ಕೊರಳಿಗೆ ಸುತ್ತಿಕೊಳ್ಳುವ ಬಟ್ಟೆ.

गात्र, पु० ಶರೀರ.

गाथा, स्त्री० ವೃತ್ತಾಂತ ; ಸ್ತುತಿ.

गाद, स्त्री० ಗಸಿ ; ಬಗ್ಗಡ.

गादड़ } गादर } वि० ಭೀರು ; ಹೇಡಿ ; ಮೈಗಳ್ಳ.

गादा, पु० ಹಸಿಧಾನ್ಯ ; ಕುಯ್ಲಿಗೆ ತಯಾರಾಗದ ಫಸಲು.

गादी, स्त्री० दे० **गद्दी.**

गादुर, पु० ಬಾವಲಿ ; ಗಬ್ಬಿಲ.

गाध, पु० ಸ್ಥಲ ; ಆಳ ; ನದಿಯ ಪ್ರವಾಹ.

गान, पु० ಗಾಯನ ; ಸಂಗೀತ ; ಗೀತ.

गाना, स० ತಾಳಸ್ವರಗಳನ್ನು ಅನುಸರಿಸಿ ಹಾಡು ; ಹೊಗಳು ; ವಿಸ್ತಾರವಾಗಿ ವರ್ಣಿಸು.

ग़ाफ़िल, वि० ಎಚ್ಚರವಿಲ್ಲದ ; ಮೈಮೇಲೆ ಜ್ಞಾನವಿಲ್ಲದ ; ಅಜಾಗರೂಕತೆಯ.

गाभ, पु० ಪಶುಗಳ ಗರ್ಭ.

गाभा, पु० ಮುಂಚಿಗುರು ; ತಳಿರು ; ನವೀನ ಪಲ್ಲವ; ಮರದ ತಿರುಳು.

गाभिन } गाभिनी } वि० ಗರ್ಭಿಣಿ.

गाम, पु० दे० **गाँव.**

गामी, वि० ನಡೆಯುವವನು ; ರಮಿಸುವವನು.

गाय, स्त्री० ಗೋವು; ಹಸು; ಆಕಳು; ಸರಳ ಸ್ವಭಾವದವನು.

गायक, पु० ಹಾಡುಗಾರ ; ಸಂಗೀತಗಾರ ; ಗಾಯಕ.

गायकी, स्त्री० ಹಾಡುವವಳು.

गायकोठ, स्त्री० ಗೋಶಾಲೆ.

ग़ायत, वि० ಅತ್ಯಂತ ; ಬಹಳಹೆಚ್ಚು.

गायन, पु० ಹಾಡುಗಾರಿಕೆ.

ग़ायब, वि० ಅದೃಶ್ಯ ; ಲುಪ್ತ ; ಮಾಯವಾದ ;—**होना** ಅದೃಶ್ಯವಾಗು ; ಕಳವಾಗಿ ಹೋಗು.

ग़ायबाना, क्रि० ತಿಳಿಯದಂತೆ ; ಗೊತ್ತಾಗದಂತೆ ; ರಹಸ್ಯವಾಗಿ.

ग़ार, पु० ಆಳವಾದ ಗುಂಡಿ ; ಗುಹೆ.

ग़ारत, वि० ಧ್ವಂಸವಾದ ; ನಾಶವಾದ ; ನಷ್ಟಭ್ರಷ್ಟ.

ग़ारद्, स्त्री० ಸಿಪಾಯಿಗಳ ಪಹರೆ; ಕಾವಲು.

गारना, स० ಹಿಂಡು; ತೆಗೆ; ತ್ಯಜಿಸು

गारा, पु० ಗಚ್ಚು; ಗಾರೆ.

गारी, स्त्री० ಬೈಗಳು; ದುರ್ವಚನ.

गारो, पु० ಅಹಂಕಾರ; ಹೆಮ್ಮೆ.

गार्हस्थ्य, पु० ಗೃಹಸ್ಥಾಶ್ರಮ.

गाल, पु० ಕೆನ್ನೆ; ಗಲ್ಲ; ಬಾಯಿ ಬಡಕುತನ; ಒಂದು ಹಿಡಿ; ತುತ್ತು;—**बजाना** ಜಂಬಕೊಚ್ಚು; —**फुलाना** ಹೆಮ್ಮೆ ತೋರಿಸು; ಕೋಪಿಸು; ಬಡಾಯಿಕೊಚ್ಚು; ಹರಟೆಹೊಡಿ;—**मारना** ಇದ್ದದ್ದು ಇಲ್ಲದ್ದು ಎಲ್ಲಾ ಸೇರಿಸಿ ಹೇಳು.

गालगूल, पु० ತಲೆಹರಟೆ.

